2019 ಕ.ತೀ.ವ 1107

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹಾ

## ಪದ್ಮಭೂಷಣ ಡಾ|| ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್ –ವಿರುದ್ಧ– ಕರ್ನಾಟಕ ರಾಜ್ಯ, ಮಹಾಲಕ್ಷ್ಮೀಪುರಂ ಪೊಲೀಸ್ ಠಾಣೆ ಮತ್ತು ಇತರರು*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ತಹಸೀಲ್ದಾರ್, ಬೆಂಗಳೂರು ಉತ್ತರ ತಾಲೂಕು (ಎದುರುದಾರ ಸಂ.2) ಇವರು, ಸಂಖ್ಯೆ: ಎಂ.ಎ.ಜಿ (107) ಸಿ.ಆರ್. 392/13–14 (ಅನುಬಂಧ – ಎಂ) ರಲ್ಲಿ ಹೊರಡಿಸಿದ ದಿನಾಂಕ: 16.12.2016ರ ಆದೇಶದ ಕಾನೂನು ಸಮ್ಮತತೆ ಮತ್ತು ಸರಿತನವನ್ನು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಈ ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

ಸದರಿ ಆದೇಶದ ಮೂಲಕ, 2ನೇ ಸಂಖ್ಯೆಯ ಎದುರುದಾರರು ಬೆಂಗಳೂರು ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಯವರನ್ನು ಟೆಕ್ನಿಕಲ್ ರಿಸೀವರ್‌ನನ್ನಾಗಿ ಮತ್ತು ಶ್ರೀ ಎಚ್. ಶ್ರೀನಿವಾಸ್, ವಿಶೇಷ ತಹಸೀಲ್ದಾರ್‌ರವರು (ಪ್ರಭಾರ) ಪದ್ಮಭೂಷಣ ಡಾ|| ಎಂ.ಸಿ.ಮೋದಿ ಪಬ್ಲಿಕ್ ಟ್ರಸ್ಟ್‌ನ ಅಡ್ಮಿನ್ಸ್ಟ್ರೇಟಿವ್ ರಿಸೀವರ್ ಆಗಿ ನೇಮಕ ಮಾಡಿದ್ದಾರೆ. ಸಂಹಿತೆಯ 146ನೇ ಪ್ರಕರಣದ ಓದಿನಿಂದ, ಸದರಿ ಉಪಬಂಧದ ಅಡಿಯಲ್ಲಿ ದಂಡಾಧಿಕಾರಿಯವರು, ವಿವಾದದ ವಸ್ತುವಿಷಯವನ್ನು ಸೇರಿಸಿದ ನಂತರವಷ್ಟೇ ರಿಸೀವರನನ್ನು ನೇಮಕ ಮಾಡಿಕೊಳ್ಳಲು ಅಧಿಕಾರವುಳ್ಳವರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಸಂಹಿತೆಯ 146ನೇ ಪ್ರಕರಣದ ಪ್ರಸ್ತುತ ಶೀರ್ಷಿಕೆಯಲ್ಲಿ "ವಿವಾದದ ವಿಷಯವನ್ನು ಸೇರಿಸುವ ಹಾಗೂ ರಿಸೀವರನನ್ನು ನೇಮಕ ಮಾಡುವ ಅಧಿಕಾರ" ಎಂದು ಓದಲಾಗಿದೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ: 275/2017, ದಿನಾಂಕ 23ನೇ ಆಗಸ್ಟ್, 2018.

ಆಸ್ತಿಯನ್ನು ಒಮ್ಮೆ ಸೇರಿಸಿದರೆ, ಇದನ್ನು ಎಲ್ಲಾ ಸಂದರ್ಭಗಳಲ್ಲಿ ಸ್ವಯಂಚಾಲಿತವಾಗಿ ಅನುಸರಿಸಲಾಗುವುದಿಲ್ಲ. ರಿಸೀವರನನ್ನು ಸ್ವತ್ತನ್ನು ನೋಡಿಕೊಳ್ಳಲು ನೇಮಿಸಬೇಕು ಎಂಬುದು ಸತ್ಯವಾದುದಾಗಿದೆ. ಸಂಹಿತೆಯ 146(2)ನೇ ಪ್ರಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು, ದಂಡಾಧಿಕಾರಿಯವರು ರಿಸೀವರನನ್ನು ನೇಮಕ ಮಾಡಿಕೊಳ್ಳುವ ಅಥವಾ ವಿವಾದದಲ್ಲಿರುವ ಆಸ್ತಿಯನ್ನು ಸಂರಕ್ಷಿಸುವ ಕೆಲವು ಇತರ ಏರ್ಪಾಟುಗಳನ್ನು ಮಾಡುವುದು ಅವರ ವಿವೇಚನಾಧಿಕಾರವಾಗಿರುತ್ತದೆ. ಆದರೆ, ಕೆಲವು ಸಂದರ್ಭದಲ್ಲಿ ದಂಡಾಧಿಕಾರಿಯವರು ವಿವಾದದ ವಿಷಯವನ್ನು ಮೊದಲು ಸೇರಿಸದೆ ರಿಸೀವರನನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಹೊಂದಿರುವುದಿಲ್ಲ. ಬೊಮ್ಮ ಕೊಮ್ ನಾರಾಯಣ್ ನಾಯಕ್ ಪ್ರಕರಣದಲ್ಲಿ ಈ ನ್ಯಾಯಾಲಯವು ಹೇಳಲಾದಂತೆ, ಸಂಹಿತೆಯ 146ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ವಿಧಿಸಲಾದಂಥ ವಿವಾದದ ವಿಷಯವನ್ನು ಸೇರಿಸುವುದು 2ನೇ ಉಪ–ಪ್ರಕರಣದ ಮೇರೆಗೆ ರಿಸೀವರನನ್ನು ನೇಮಕ ಮಾಡುವ ಪೂರ್ವನಿದರ್ಶನ ಸ್ಥಿತಿಯಲ್ಲಿದೆ.

ತಹಸೀಲ್ದಾರರು ಹಾಗೂ ದಾವಣಗೆರೆಯ ಜಿಲ್ಲಾಧಿಕಾರಿಯವರು, ಶ್ರೀ ಕೆ. ಗೋಪಾಲಸ್ವಾಮಿ ರಿಸೀವರ್, ಇವರನ್ನು ಅವನ ವಯೋನಿವೃತ್ತಿಯ ದಿನಾಂಕದವರೆಗೆ ರಿಸೀವರನಾಗಿ ಕಾರ್ಯ ನಿರ್ವಹಿಸಲು ಮುಂದುವರೆಸಿ, ಆದೇಶ ಸಂಖ್ಯೆ ಎಂಎಜಿ/107 ಸಿಆರ್:392/13–14 ದಿನಾಂಕ: 16.12.2016ರ ಪ್ರಕಾರ ನೇಮಕ ಮಾಡಲಾಗಿದೆಯೆನ್ನುವ ದೋಷಯುಕ್ತ ಊಹೆಯ ಆಧಾರದಲ್ಲಿ ಮುಂದುವರಿದಿರುವರು. ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಾಖಲೆಗಳು, ದಿನಾಂಕ: 18.7.2016ರಂದು ತಹಸೀಲ್ದಾರನು ಹೊರಡಿಸಿದ ತರುವಾಯದ ಆದೇಶದ ಮೂಲಕ ಶ್ರೀ ಕೆ. ಗೋಪಾಲಸ್ವಾಮಿಯನ್ನು ರಿಸೀವರನಾಗಿ ಮಾಡಿಕೊಂಡ ನೇಮಕಾತಿಯನ್ನು ರದ್ದುಮಾಡಲಾಗಿತ್ತು ಮತ್ತು ತಟಸ್ಥಗೊಳಿಸಲಾಗಿತ್ತು ಎಂಬುದನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತವೆ. ಇದರ ಪರಿಣಾಮವಾಗಿ, ಹಿಂದಿನ ರಿಸೀವರನನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡಿಕೊಳ್ಳಲು ತಹಸೀಲ್ದಾರರಿಗೆ ನಿರ್ದೇಶಿಸಲು ಜಿಲ್ಲಾಧಿಕಾರಿಗೆ ಯಾವುದೇ ಆಧಾರವಿಲ್ಲ ಅಥವಾ ಹಿಂದೆ ಹೇಳಲಾದ ಶ್ರೀ ಕೆ. ಗೋಪಾಲಸ್ವಾಮಿಯವರ ಸ್ಥಳದಲ್ಲಿ ಟ್ರಸ್ಟಿನ ರಿಸೀವರನಾಗಿ ಜಿಲ್ಲಾ ಆರೋಗ್ಯ ಅಧಿಕಾರಿಯನ್ನು ಹಾಗೂ ಪ್ರಭಾರಿ ತಹಸೀಲ್ದಾರರನ್ನು ನೇಮಕ ಮಾಡಿ ಮುಂದುವರಿಸಲು

2ನೇ ಸಂಖ್ಯೆಯ ಎದುರುದಾರನಿಗೆ ಯಾವುದೇ ಆಧಾರ ಇರುವುದಿಲ್ಲ. ಅಷ್ಟೇ ಅಲ್ಲದೆ, ರಿಸೀವರನ ವಯೋನಿವೃತ್ತಿಯು, ವಿವಾದದ ವಿಷಯಕ್ಕೆ ರಿಸೀವರನನ್ನು ನೇಮಕ ಮಾಡುವುದಕ್ಕೆ ಒಂದು ಆಧಾರವಾಗಿರುವುದಿಲ್ಲ.

ಹೀಗಾಗಿ, ಮೇಲಿನ ಎಲ್ಲಾ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಮೇಲೆ ಉಲ್ಲೇಖಿಸಲಾದ ಪ್ರಾಧಿಕಾರಗಳಲ್ಲಿ ನಮೂದಿಸಲಾದ ಕಾನೂನಿನ ಸ್ಥಾನವನ್ನು ಒಟ್ಟಾರೆಯಾಗಿ ಪರಿಗಣಿಸಿದ ಮೇಲೆ ಎರಡನೇ ಸಂಖ್ಯೆಯ ಎದುರುದಾರನು, ದಂಡ ಪ್ರಕ್ರಿಯಾ ಸಂಹಿತೆಯ 145 ಹಾಗೂ 146ನೇ ಪ್ರಕರಣಗಳ ಅಗತ್ಯತೆಗಳನ್ನು ಪೂರೈಸಲು ವಿಫಲನಾಗಿರುವನೆಂದು ತೀರ್ಮಾನಿಸುತ್ತೇನೆ. ಪ್ರಶ್ನಿತ ಆದೇಶವು, ವಿವಾದದ ವಿಷಯವನ್ನು ಸೇರಿಸುವ ಆಧಾರಗಳನ್ನು ಬಹಿರಂಗಪಡಿಸುತ್ತಿಲ್ಲ. 2ನೇ ಸಂಖ್ಯೆಯ ಎದುರುದಾರನು, ವಿಷಯದ ಅಧಿಕಾರವ್ಯಾಪ್ತಿಯನ್ನು ಹೊಂದುವ ಯಾವುದೇ ತುರ್ತು ಅಥವಾ ಅಂಥ ಇತರ ಆಧಾರಗಳು ಇರುವಿಕೆಯ ಬಗ್ಗೆ ಯಾವುದೇ ಮನವರಿಕೆ ಮಾಡಿಕೊಂಡಿರುವುದಿಲ್ಲ. 2ನೇ ಸಂಖ್ಯೆಯ ಎದುರುದಾರನು ವಿವಾದದ ವಿಷಯದ ಮೊದಲ ಪರಿಣಾಮಕಾರಿ ಜೋಡಣೆಯಿಲ್ಲದೆ ರಿಸೀವರನನ್ನು ನೇಮಕಮಾಡಿಕೊಳ್ಳುವಲ್ಲಿ ಗಂಭೀರಲೋಪವೆಸಗಿದ್ದಾರೆ.

ಇದರ ಪರಿಣಾಮವಾಗಿ, ಸಂಹಿತೆಯ 145 ಮತ್ತು 146ನೇ ಪ್ರಕರಣಗಳ ಉಪಬಂಧಗಳಿಗೆ ವಿರುದ್ಧವಾಗಿರುವ 2ನೇ ಸಂಖ್ಯೆಯ ಎದುರುದಾರನು ತೆಗೆದುಕೊಂಡ ಕ್ರಮವನ್ನು ಸಮರ್ಥಿಸಲಾಗುವುದಿಲ್ಲ. ಪ್ರಶ್ನಿತ ಆದೇಶವು ತಳ್ಳಿಹಾಕಲು ತಕ್ಕುದಾಗಿರುತ್ತದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *ಐಎಲ್‌ಆರ್ 1985, ಕಂಟ್ 4038*
   *ಬೊಮ್ಮ ಕೋಮ್ ನಾರಾಯಣ್ ನಾಯಕ್ –ವಿರುದ್ಧ–*
   *ಬೊಮ್ಮ ಕೊಮ್ ನಾರಾಯಣ ನಾಯಕ್* *(ಉಲ್ಲೇ) 16*
2. *(1979) 4 ಎಸ್‌ಸಿಸಿ, 665*
   *ಮಥುರಾಲಾಲ್ –ವಿರುದ್ಧ– ಭಾನ್ವರ್‌ಲಾಲ್*
   *ಹಾಗೂ ಮತ್ತೊಬ್ಬರು* *(ಉಲ್ಲೇ) 21*

*3. (1978) 1 ಎಸ್‌ಸಿಸಿ 210*
*ಚಂದು ನಾಯಕ್ ಮತ್ತು ಇತರರು –ವಿರುದ್ಧ–*
*ಸೀತಾರಾಮ್ ಬಿ. ನಾಯಕ್ ಮತ್ತು ಮತ್ತೊಬ್ಬರು (ಉಲ್ಲೇ)22*

ಅರ್ಜಿದಾರರ ಪರ : ಶ್ರೀ ಕೆ. ಆನಂದರಾಮು, ವಕೀಲರು ಇವರ ಪರವಾಗಿ ಶ್ರೀ ಕೆ. ಶುಭಾರಾವ್, ಹಿರಿಯ ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎಸ್. ರಾಚಯ್ಯ, ಪ್ರತಿವಾದಿ 1 ರಿಂದ 5 ವರೆಗಿನ ಉಚ್ಚ ನ್ಯಾಯಾಲಯ ಸರ್ಕಾರಿ ವಕೀಲರು.
ಶ್ರೀಮತಿ ಪ್ರಮೀಳಾ ನೇಸರ್ಗಿ, ಹಿರಿಯ ವಕೀಲರು, ಇವರೊಂದಿಗೆ
ಶ್ರೀ ಅಜಯ್‌ಕುಮಾರ್ ಎಂ., ಪ್ರತಿವಾದಿ 6 ಮತ್ತು 7ರ ಪರವಾದ ದಾವೆಗೆ ಸೇರಿರುವ ಅರ್ಜಿದಾರರ ಪರವಾದ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಜಾನ್ ಮೈಕೆಲ್ ಕುನ್ಹಾ:**

ತಹಸೀಲ್ದಾರ್, ಬೆಂಗಳೂರು ಉತ್ತರ ತಾಲೂಕು (ಎದುರುದಾರ ಸಂ.2) ಇವರು, ಸಂಖ್ಯೆ: ಎಂ.ಎ.ಜಿ (107) ಸಿ.ಆರ್. 392/13–14 (ಅನುಬಂಧ–ಎಂ) ರಲ್ಲಿ ಹೊರಡಿಸಿದ ದಿನಾಂಕ: 16.12.2016ರ ಆದೇಶದ ಕಾನೂನು ಸಮ್ಮತತೆ ಮತ್ತು ಸರಿತನವನ್ನು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಈ ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

2. ಸದರಿ ಆದೇಶದ ಮೂಲಕ, 2ನೇ ಸಂಖ್ಯೆಯ ಎದುರುದಾರರು ಬೆಂಗಳೂರು ಜಿಲ್ಲೆಯ ಜಿಲ್ಲಾ ಆರೋಗ್ಯ ಅಧಿಕಾರಿಯವರನ್ನು ಟೆಕ್ನಿಕಲ್ ರಿಸೀವರ್‌ನನ್ನಾಗಿ ಮತ್ತು ಶ್ರೀ ಎಚ್. ಶ್ರೀನಿವಾಸ್, ವಿಶೇಷ ತಹಸೀಲ್ದಾರ್‌ರವರು (ಪ್ರಭಾರ) ಪದ್ಮಭೂಷಣ

ಡಾ॥ ಎಂ.ಸಿ.ಮೋದಿ ಪಬ್ಲಿಕ್ ಟ್ರಸ್ಟ್‌ನ ಅಡ್ಮಿಸ್ಟ್ರೇಟಿವ್ ರಿಸೀವರ್ ಆಗಿ ನೇಮಕ ಮಾಡಿದ್ದಾರೆ.

3. ಪ್ರಸ್ತುತ ಅರ್ಜಿ ಸಲ್ಲಿಸಲು ಕಾರಣವಾಗಿರುವ ಸಂಕ್ಷಿಪ್ತ ಸಂಗತಿಗಳೇನೆಂದರೆ, ಪದ್ಮಭೂಷಣ ಡಾ॥ ಎಂ.ಸಿ. ಮೋದಿಯವರು ಶ್ರೇಷ್ಠ ನೇತ್ರ ಶಸ್ತ್ರಚಿಕಿತ್ಸಕರಾಗಿದ್ದು, ಕೆಲವು ಉಪಕಾರ ಕಾರ್ಯಗಳನ್ನು ಕೈಗೊಳ್ಳಲು "ಪದ್ಮಭೂಷಣ ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್" (ಇಲ್ಲಿ ಇನ್ನು ಮುಂದೆ "ಟ್ರಸ್ಟ್" ಎಂದು ಉಲ್ಲೇಖಿಸಲಾಗಿದೆ) ಹೆಸರಿನಲ್ಲಿ ಟ್ರಸ್ಟನ್ನು ಹುಟ್ಟುಹಾಕಿದ್ದಾರೆ. ಸದರಿ ಟ್ರಸ್ಟನ್ನು ದಿನಾಂಕ: 20.9.1965ರಂದು ನೋಂದಣಿ ಮಾಡಲಾಗಿತ್ತು. ಅವರು ಈ ಟ್ರಸ್ಟ್‌ನ ನಿರ್ಮಾತೃವಾಗಿದ್ದರು. ಅವರು ದಿನಾಂಕ: 11.11.2005ರಂದು ಮರಣ ಹೊಂದಿದ್ದಾರೆ. ಆತನ ಮರಣದ ನಂತರ ಡಾ॥ ಸುವರ್ಣ ಮೋದಿ ಹಾಗೂ ಅಮರನಾಥ ಮೋದಿಯವರು ಟ್ರಸ್ಟಿಗಳಾಗಿ ಮುಂದುವರೆದಿದ್ದರು. ಡಾ॥ ಸುವರ್ಣ ಮೋದಿಯವರು ದಿನಾಂಕ: 26.08.2012ರಂದು ನಿಧನರಾದರು ಮತ್ತು ಅಮರನಾಥ್ ಮೋದಿಯವರು ದಿನಾಂಕ: 28.01.2014ರಂದು ಮರಣ ಹೊಂದಿದ್ದಾರೆ. ಆತನ ಮರಣದ ನಂತರ ಕೆಲವು ವ್ಯಕ್ತಿಗಳು ನಗರ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂ.837/2014ರಂದು ಟ್ರಸ್ಟಿಗಳ ನೇಮಕಾತಿಯನ್ನು ಕೋರಿ ಅರ್ಜಿ ಸಲ್ಲಿಸಿದ್ದರು. ಇಲ್ಲಿ ಅರ್ಜಿದಾರರನ್ನೂ ಒಳಗೊಂಡಂತೆ ನಂಜುಡಪ್ಪ ಎಂಬೊಬ್ಬ ಮತ್ತು ಇತರರ ವಿರುದ್ಧ ಕ್ರಿಮಿನಲ್ ಸಂಖ್ಯೆ:41/2014ರಲ್ಲಿ ಎದುರುದಾರ ಸಂಖ್ಯೆ.1/ಮಹಾಲಕ್ಷ್ಮಿಪುರಂ ಪೊಲೀಸು ಠಾಣೆಯಲ್ಲಿ ದೂರನ್ನೂ ಸಹ ಸಲ್ಲಿಸಲಾಗಿತ್ತು. ಸದರಿ ದೂರಿನಲ್ಲಿ, ತಹಸೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರು, ಆದೇಶ ದಿನಾಂಕ: 31.05.2014ರ (ಅನುಬಂಧ–ಡಿ) ಮೂಲಕ ಟ್ರಸ್ಟಿನ ರಿಸೀವರ್ ಆಗಿ ಬೆಂಗಳೂರು ಉತ್ತರ ತಾಲೂಕಿನ ವಿಶೇಷ ತಹಸೀಲ್ದಾರ್ ಅವರನ್ನು ನೇಮಕ ಮಾಡಿದ್ದರು. ಈ ನಡುವೆ, ಲಘು ವ್ಯಾಜ್ಯಗಳ ನ್ಯಾಯಾಲಯ ಬೆಂಗಳೂರು ಇಲ್ಲಿ ಲಘು ವ್ಯಾಜ್ಯ ಸಂಖ್ಯೆ: 1458/2011ರಲ್ಲಿ ಕೆಲವು ಇತರ ವ್ಯವಹರಣೆಗಳನ್ನು ಆರಂಭಿಸಲಾಗಿತ್ತು. ಹಿಂದೆ ಹೇಳಲಾದ ನಂಜುಂಡಪ್ಪ, ತಾನು ಆಡಳಿತಾಧಿಕಾರಿಯಾಗಿದ್ದೆನೆಂದು ಕ್ಲೇಮು ಮಾಡಿ ಅದರಲ್ಲಿ ಮೆಮೊವನ್ನು ಸಲ್ಲಿಸಿದ್ದಾರೆ. ಲಘು ವ್ಯಾಜ್ಯಗಳ ನ್ಯಾಯಾಧೀಶರು,

ಸದರಿ ನಂಜುಂಡಪ್ಪನು, ಟ್ರಸ್ಟ್‌ನ ಸ್ವತ್ತನ್ನು ನಿರ್ವಹಿಸುವ ಅಧಿಕಾರ ಹೊಂದಿಲ್ಲವೆಂದು ಅಭಿಪ್ರಾಯಪಟ್ಟು ದಿನಾಂಕ: 08.08.2014ರಂದು ಆದೇಶ ಹೊರಡಿಸಿದ್ದಾರೆ.

4. 2016ನೇ ವರ್ಷದಲ್ಲಿ, ಎಚ್.ಎಂ. ಆಸ್ವಾಲ್ ಎಂಬೊಬ್ಬನು ಟ್ರಸ್ಟಿಗೆ ಟ್ರಸ್ಟಿ/ಟ್ರಸ್ಟಿಗಳನ್ನು ನೇಮಕ ಮಾಡಬೇಕೆಂದು ಚಿತ್ರದುರ್ಗದ ಜಿಲ್ಲಾಧಿಕಾರಿಯವರಿಗೆ ಅರ್ಜಿಯನ್ನು ಸಲ್ಲಿಸಿದ್ದನು. ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆಯ ರಚನೆಯಾದ ನಂತರ ದಾವಣಗೆರೆಯ ಜಿಲ್ಲಾಧಿಕಾರಿಯವರನ್ನು ಅಗತ್ಯವಿರುವುದನ್ನು ಮಾಡಲು ಸಂಪರ್ಕಿಸಬಹುದು ಎಂದು ಸೂಚಿಸಿ ಹಿಂಬರಹವನ್ನು ನೀಡಿದ್ದಾರೆ. ಶ್ರೀ ಆಸ್ವಾಲ್‌ರವರು, ದಾವಣಗೆರೆಯ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಿದ್ದು, ಟ್ರಸ್ಟಿ/ಟ್ರಸ್ಟಿಗಳನ್ನು ನೇಮಕಾತಿ ಮಾಡಲು ದಿನಾಂಕ: 20.9.1965ರ ಟ್ರಸ್ಟ್ ಡೀಡ್‌ನ ಖಂಡ – 10ರ ಪ್ರಕಾರ ಅವರ ಅಧಿಕಾರವನ್ನು ಚಲಾಯಿಸಲು ಕೋರಿದ್ದಾರೆ. ದಾವಣಗೆರೆಯ ಜಿಲ್ಲಾಧಿಕಾರಿಯವರು, ದಿನಾಂಕ: 20.9.1965ರ ಟ್ರಸ್ಟ್ ಡೀಡ್‌ನ 10ನೇ ಖಂಡದಲ್ಲಿ ಪರಿಭಾಷಿಸಿರುವಂತೆ ದಿನಾಂಕ: 24.06.2016ರ ಆದೇಶದ ಪ್ರಕಾರ ಏಕಮಾತ್ರ ಟ್ರಸ್ಟಿಯಾಗಿ ಇಲ್ಲಿನ ಅರ್ಜಿದಾರನನ್ನು ನೇಮಕ ಮಾಡಿದ್ದಾರೆ. ಏಕಮೇವ ಟ್ರಸ್ಟಿಯಾಗಿ ಅರ್ಜಿದಾರನನ್ನು ನೇಮಕ ಮಾಡಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ದಿನಾಂಕ: 31.05.2014ರ ಅವನ ಆದೇಶದ ಮೂಲಕ ರಿಸೀವರ್ ಆಗಿ ವಿಶೇಷ ತಹಸೀಲ್ದಾರನನ್ನು ಈ ಮೊದಲು ನೇಮಕ ಮಾಡಿದ್ದ ಬೆಂಗಳೂರು ಉತ್ತರ ತಾಲೂಕು / 2ನೇ ಎದುರುದಾರ ತಹಸೀಲ್ದಾರರು ದಿನಾಂಕ 18.7.2016ರ ಅನುಬಂಧ 'ಜಿ' ಪ್ರಕಾರ ಸದರಿ ನೇಮಕಾತಿಯನ್ನು ಹಿಂಪಡೆದುಕೊಂಡರು. ಏತನ್ಮಧ್ಯೆ, ಏಕಮೇವ ಟ್ರಸ್ಟಿಯಾಗಿ ಅರ್ಜಿದಾರನ ನೇಮಕಾತಿಯನ್ನು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 39158/161/2016ರಲ್ಲಿ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಮತ್ತು ಇತರರು ರಿಟ್ ಅರ್ಜಿಯನ್ನು ಸಲ್ಲಿಸಿರುವುದು ತಿಳಿದುಬಂತು. ಪಕ್ಷಕಾರರ ಸುನಾವಣೆಯನ್ನು ಮಾಡಿದ ನಂತರ ಈ ನ್ಯಾಯಾಲಯವು, ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಪಕ್ಷಕಾರರಿಗೆ ಸೂಚಿಸಿ ದಿನಾಂಕ 19.07.2016ರ ಆದೇಶವನ್ನು ಹೊರಡಿಸಿತು.

5. ಆದಾಗ್ಯೂ, ದಿನಾಂಕ 18.07.2016ರ ಆದೇಶದ ಕಾರಣದಿಂದ 18.7.2016ರಿಂದ ಜಾರಿಗೆ ಬರುವಂತೆ, ವಿಶೇಷ ತಹಸೀಲ್ದಾರರು ರಿಸೀವರನಾಗಿರುವುದು ನಿಂತು ಹೋಗಿದ್ದರೂ ಕೂಡ ಅವನು ಅರ್ಜಿದಾರನಿಗೆ ಪ್ರಭಾರವನ್ನು ಹಸ್ತಾಂತರಿಸುವಲ್ಲಿ ವಿಫಲನಾಗಿದ್ದಾನೆ. ಇದರಿಂದ, ಅರ್ಜಿದಾರನು ಪೋಲೀಸರಿಗೆ ಹಾಗೂ ಹಲವಾರು ಪ್ರಾಧಿಕಾರಗಳಿಗೆ ಸದರಿ ದೂರುಗಳನ್ನು ಮಾಡಿದ್ದಾನೆ. ಯಾವುದೇ ದಾರಿಯಿಲ್ಲದೆ ಕೊನೆಗೆ ಅರ್ಜಿದಾರನು ಮೂಲ ದಾವೆ ಸಂಖ್ಯೆ: 8028/2016ನ್ನು ಸಲ್ಲಿಸಿದ್ದು, ಇದರಲ್ಲಿ ಅವನ ನೇಮಕಾತಿಯ ಕಾರಣದಿಂದ ಟ್ರಸ್ಟಿನ ರಿಸೀವರ್ ಆಗಿ ಕಾರ್ಯ ನಿರ್ವಹಿಸುವುದರಿಂದ ವಿಶೇಷ ತಹಸೀಲ್ದಾರನನ್ನು ನಿರ್ಬಂಧಿಸುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾನೆ. ಈ ಹಂತದಲ್ಲಿ, ಬೆಂಗಳೂರು ಉತ್ತರ ತಾಲೂಕಿನ ಜಿಲ್ಲಾಧಿಕಾರಿಯು (5ನೇ ಎದುರುದಾರ) ತಾಂತ್ರಿಕ ರಿಸೀವರನ್ನಾಗಿ ಬೆಂಗಳೂರಿನ ಜಿಲ್ಲಾ ಆರೋಗ್ಯ ಅಧಿಕಾರಿಯನ್ನು ನೇಮಕ ಮಾಡಲು, ಶ್ರೀ ಕೆ. ಗೋಪಾಲಸ್ವಾಮಿ, ವಿಶೇಷ ತಹಸೀಲ್ದಾರರ ವಯೋನಿವೃತ್ತಿಯು ಸನ್ನಿಹಿತವಾಗಿರುವ ಕಾರಣದಿಂದ ಆಡಳಿತಾತ್ಮಕ ರಿಸೀವರನನ್ನಾಗಿ ಬೆಂಗಳೂರು ಉತ್ತರ ತಾಲೂಕಿನ ವಿಶೇಷ ತಹಸೀಲ್ದಾರರನ್ನು ನೇಮಕ ಮಾಡಿಕೊಳ್ಳಲು ಬೆಂಗಳೂರಿನ ಉತ್ತರ ತಾಲೂಕಿನ (2ನೇ ಎದುರುದಾರ) ತಹಸೀಲ್ದಾರರಿಗೆ ಪತ್ರವನ್ನು ಬರೆದಿದ್ದಾರೆ. ಈ ಪತ್ರವನ್ನಾಧರಿಸಿ, 2ನೇ ಸಂಖ್ಯೆಯ ಎದುರುದಾರ/ತಹಸೀಲ್ದಾರನು, ತಾಂತ್ರಿಕ ರಿಸೀವರನನ್ನಾಗಿ ಬೆಂಗಳೂರು ಜಿಲ್ಲೆಯ ಜಿಲ್ಲಾ ಆರೋಗ್ಯಾಧಿಕಾರಿಯನ್ನು ಮತ್ತು ಟ್ರಸ್ಟ್‌ನ ಆಡಳಿತಾತ್ಮಕ ಅಧಿಕಾರಿಯಾಗಿ ಶ್ರೀ ಎಚ್. ಶ್ರೀನಿವಾಸ್, ವಿಶೇಷ ತಹಸೀಲ್ದಾರರನ್ನು (ಪ್ರಭಾರ) ನೇಮಕ ಮಾಡಿಕೊಳ್ಳುವ ಪ್ರಶ್ನಿತ ಆದೇಶವನ್ನು ಹೊರಡಿಸಿದ್ದು, ಅದನ್ನು ಈ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ.

6. ಪ್ರಾರಂಭಿಕವಾಗಿ, 1 ರಿಂದ 5ರ ವರೆಗಿನ ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿದ್ದು, ತದನಂತರ, 6 ಮತ್ತು 7ನೇ ಸಂಖ್ಯೆಯ ಎದುರುದಾರರು ತಾವೇ ದಾವೆಗೆ ಸೇರಿಕೊಂಡಿದ್ದು, ಅರ್ಜಿಯನ್ನು ವಿರೋಧಿಸಿ ಆಕ್ಷೇಪಣೆಗಳ ಸವಿವರವಾದ ವಿವರಣೆಯನ್ನು ಸಲ್ಲಿಸಿದ್ದಾರೆ. ಇವುಗಳ ಜೊತೆಗೆ, ಅರ್ಜಿದಾರನು ಮಾಡಿದ ಬೇರೆ ಬೇರೆ ಹೇಳಿಕೆಗಳನ್ನು ನಿರಾಕರಿಸಿದ್ದಾರೆ. ಟ್ರಸ್ಟು ನಡೆಸುತ್ತಿರುವ

ವಿವಿಧ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ನೌಕರರನ್ನು ಒಳಗೊಂಡ ಇತರ ಅರ್ಜಿದಾರರು ಈ ಅರ್ಜಿಯನ್ನು ತಮ್ಮನ್ನು ದಾವೆಗೆ ಸೇರಿಸಲು ಕೋರಿ ವಾದಕಾಲೀನ ಅರ್ಜಿಯನ್ನು ಸಹ ಸಲ್ಲಿಸಿದ್ದಾರೆ.

7. ಅರ್ಜಿದಾರನ ಪರವಾಗಿ ಹಾಜರಾಗಿರುವ ಶ್ರೀ ಕೆ. ಆನಂದರಾಮರವರ ಪರವಾದ ಮಾನ್ಯ ಹಿರಿಯ ವಕೀಲರಾದ ಶ್ರೀ ಕೆ. ಸುಬ್ಬರಾವ್‌ರವರ ವಾದವನ್ನು ಆಲಿಸಿದ್ದೇನೆ; 6 ಮತ್ತು 7ನೇ ಸಂಖ್ಯೆಯ ಎದುರುದಾರರ ಪರವಾಗಿ ಮಾನ್ಯ ಹಿರಿಯ ವಕೀಲರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರ ಪರವಾಗಿ ಅಜಯ್ ಕುಮಾರ್ ಎಂ. ಇವರ ವಾದವನ್ನು; 8 ರಿಂದ 16ರ ವರೆಗಿನ ಪ್ರಸ್ತಾವಿತ ಎದುರುದಾರರ ಪರವಾಗಿ ಹಾಜರಾಗಿರುವ ಹಿರಿಯ ವಕೀಲರಾದ ಶ್ರೀ ವಿ. ವಿಶ್ವನಾಥ್ ಇವರ ಪರವಾದ ಶ್ರೀ ಬಿ.ಜೆ. ನಂಜುಂಡಾರಾಧ್ಯ, 16 ಮತ್ತು 17ನೇ ಸಂಖ್ಯೆಯ ಪ್ರಸ್ತಾವಿತ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಟಿ.ಎನ್. ರಘುಪತಿ, 18 ರಿಂದ 23ರ ವರೆಗಿನ ಪ್ರಸ್ತಾವಿತ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಆರ್.ಬಿ. ಸದಾಶಿವಪ್ಪ; ಹಾಗೂ 24 ಮತ್ತು 25ನೇ ಸಂಖ್ಯೆಯ ಪ್ರಸ್ತಾವಿತ ಎದುರುದಾರರ ಪರವಾಗಿ ಹಾಜರಾಗಿರುವ ಎಚ್.ಆರ್. ನಾರಾಯಣರಾವ್ ಇವರ ಪರವಾದ ಶ್ರೀ ಎಂ.ಐ. ಅರುಣ್, ಇವರುಗಳ ವಾದವನ್ನು ನಾನು ಆಲಿಸಿದ್ದೇನೆ.

8. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರು ಈ ಮುಂದಿನ ವಾದಗಳನ್ನು ಎತ್ತಿದ್ದಾರೆ:

i) ಕ್ರಿಮಿನಲ್ ಸಂಖ್ಯೆ:41/2014ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 145ನೇ ಪ್ರಕರಣದ ಮೇರೆಗೆ ತಹಸೀಲ್ದಾರರು ಪ್ರಾರಂಭಿಸಿದ ವ್ಯವಹರಣೆಗಳನ್ನು ದಿನಾಂಕ 18.7.2016ರಂದು ಮುಕ್ತಾಯಗೊಳಿಸಲಾಗಿತ್ತು. ಇದರ ಪರಿಣಾಮವಾಗಿ, ಪ್ರಶ್ನಿತ ಆದೇಶವನ್ನು ಹೊರಡಿಸಿರುವ ದಿನಾಂಕದಂದು ಯಾವುದೇ

ವ್ಯವಹರಣೆಗಳು ಇತ್ಯರ್ಥದಲ್ಲಿರಲಿಲ್ಲ. ಆದುದರಿಂದ, 2ನೇ ಸಂಖ್ಯೆಯ ಎದುರುದಾರನು, ದಂಡ ಪ್ರಕ್ರಿಯಾ ಸಂಹಿತೆಯ 146ನೇ ಪ್ರಕರಣದ ಮೇರೆಗೆ ಅಧಿಕಾರವನ್ನು ಚಲಾಯಿಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರಲಿಲ್ಲ. ಹೀಗಾಗಿ, ಪ್ರಶ್ನಿತ ಆದೇಶವು ಕಾನೂನುಬಾಹಿರವಾಗಿದ್ದು, ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ.

ii) 2ನೇ ಸಂಖ್ಯೆಯ ಎದುರುದಾರನು, ಪ್ರಶ್ನಿತ ಟ್ರಸ್ಟ್‌ಗೆ ರಿಸೀವರುಗಳನ್ನು ನೇಮಕ ಮಾಡುವಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 146ನೇ ಪ್ರಕರಣದ ಕಡ್ಡಾಯ ಅಗತ್ಯತೆಗಳನ್ನು ಅನುಸರಿಸಲು ವಿಫಲನಾಗಿದ್ದಾನೆ.

iii) ಅವನಿಗೆ ಮನದಟ್ಟಾಗುವ ಯಾವುದೇ ಆಧಾರಗಳಿಲ್ಲದಿರುವಾಗ, ಶಾಂತಿಗೆ ಭಂಗ ತರುವ ಸಂಭಾವ್ಯತೆಯಿದ್ದು, 2ನೇ ಸಂಖ್ಯೆಯ ಎದುರುದಾರನು, ರಿಸೀವರುದಾರರನ್ನು ನೇಮಕ ಮಾಡಿಕೊಳ್ಳುವ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 145(1) ಮತ್ತು 146(1)ನೇ ಪ್ರಕರಣದ ಮೇರೆಗೆ ಇದೊಂದು ಕಡ್ಡಾಯ ಅಗತ್ಯವಾಗಿದ್ದು, ಆದೇಶವನ್ನು ಹೊರಡಿಸಿರುವ ಪ್ರಾಧಿಕಾರಿಯು ಅವನ ಮುಂದೆ ಇಡಲಾದ ಸಾಕ್ಷ್ಯಾಧಾರಕ್ಕೆ ತನ್ನ ವಿವೇಚನೆಯನ್ನು ಅನ್ವಯಿಸಬೇಕು ಹಾಗೂ ಆಸ್ತಿಗೆ ಸಂಬಂಧಪಟ್ಟ ವಿವಾದಕ್ಕೆ ಸಂಬಂಧಿಸಿದ ಶಾಂತಿಗೆ ಭಂಗವಾಗಿದೆಯೆಂಬ ತೀರ್ಮಾನಕ್ಕೆ ಬರಲಾಗಿದೆ. ಪ್ರಶ್ನಿತ ಆದೇಶ ಹೊರಡಿಸುವಲ್ಲಿ ವಿವೇಚನೆ ಬಳಸಿರುವುದಿಲ್ಲ ಮತ್ತು ದಂಡಾಧಿಕಾರಿಯು ಪ್ರಶ್ನಿತ ಆದೇಶವನ್ನು ಹೊರಡಿಸಿರುವುದರ ಆಧಾರಗಳನ್ನು ಲಗತ್ತಿಸಿರುವುದಿಲ್ಲ.

iv) ವಿವಾದದ ವಿಷಯ ಸೇರಿಸಿರುವುದು ದಂಡ ಪ್ರಕ್ರಿಯಾ ಸಂಹಿತೆಯ 146(2)ನೇ ಪ್ರಕರಣದ ಮೇರೆಗೆ ರಿಸೀವರನನ್ನು ನೇಮಕ

ಮಾಡಿಕೊಳ್ಳುವುದಕ್ಕೆ ಹಿಂದಿನ ಸ್ಥಿತಿಯಾಗಿದೆ. ಪ್ರಶ್ನಿತ ಆದೇಶವನ್ನು ಸಂಬಂಧಪಟ್ಟ ಆಸ್ತಿಗೆ ಮೊದಲು ಸೇರಿಸದೆ ಪ್ರಶ್ನಿತ ಆದೇಶವನ್ನು ಮಾಡಲಾಗಿದ್ದು, ಅಧಿಕಾರ ವ್ಯಾಪ್ತಿಯಿಲ್ಲದೆ ಕಾನೂನುಬಾಹಿರ ನೇಮಕಾತಿಯನ್ನು ಮಾಡಲಾಗಿದೆ.

v) ಸಂಹಿತೆಯು 146ನೇ ಪ್ರಕರಣದ ಉಪಬಂಧಗಳ ಪ್ರಕಾರ, ದಂಡಾಧಿಕಾರಿಯುವರಿಗೆ ಮಾತ್ರ ರಿಸೀವರನನ್ನು ನೇಮಕ ಮಾಡಿಕೊಳ್ಳುವ ವಿವೇಚನೆ ನಿಹಿತವಾಗಿರುತ್ತದೆ. ಪೊಲೀಸರು ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನಾಧರಿಸಿ ಸ್ವತಂತ್ರ ನಿರ್ಣಯವನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ. ಪ್ರಶ್ನಿತ ಆದೇಶವನ್ನು ಜಿಲ್ಲಾಧಿಕಾರಿಯವರು ಹೊರಡಿಸಿದ ನಿರ್ದೇಶನಗಳ ಆಧಾರದ ಮೇಲೆ ಏಕಮಾತ್ರವಾಗಿ ಹೊರಡಿಸಲಾಗಿದೆ. 2ನೇ ಸಂಖ್ಯೆಯ ಎದುರುದಾರನು, ಜಿಲ್ಲಾಧಿಕಾರಿಕಾರಿಯವರ ನಿರ್ದೇಶನಗಳನ್ನು ಮಾತ್ರ ಜಾರಿಗೆ ತಂದಿದ್ದು ಅವರು ಹೇಳಿರುವಂತೆ ಕಾರ್ಯ ನಿರ್ವಹಿಸಿದ್ದಾನೆ; ಇದರ ಪರಿಣಾಮವಾಗಿ ಸಂಪೂರ್ಣ ವ್ಯವಹರಣೆಗಳನ್ನು ನಿರರ್ಥಕಗೊಳಿಸಲಾಗಿದೆ.

(vi) ದಿನಾಂಕ 31.5.2014ರ ಆದೇಶದ ಮೂಲಕ ನೇಮಕಗೊಂಡ ತಹಸೀಲ್ದಾರ, ಶ್ರೀ ಕೆ. ಗೋಪಾಲ ಸ್ವಾಮಿಯವರನ್ನು ಅವನ ವಯೋನಿವೃತ್ತಿಯಾಗುವ ದಿನಾಂಕದವರೆಗೆ ರಿಸೀವರನಾಗಿ ಕಾರ್ಯ ನಿರ್ವಹಿಸಲು ಮುಂದುವರಿಸಲಾಗಿತ್ತು ಎಂಬ ದೋಷಪೂರಿತ ಕಲ್ಪನೆಯ ಮೇಲೆ ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್ ಮುಂದುವರಿದಿದ್ದಾರೆ. ಶ್ರೀ ಕೆ. ಗೋಪಾಲಸ್ವಾಮಿಯುವರ ನೇಮಕಾತಿಯನ್ನು ದಿನಾಂಕ 18.7.2016ರ ತರುವಾಯದ ಆದೇಶದ ಮೂಲಕ ರದ್ದುಗೊಳಿಸಲಾಗಿತ್ತು ಎಂಬುದನ್ನು ಗಮನಿಸುವಲ್ಲಿ ಎರಡೂ ಪ್ರಾಧಿಕಾರಗಳು ವಿಫಲವಾಗಿವೆ. ಆದುದರಿಂದ, ಪ್ರಶ್ನಿತ

ಟ್ರಸ್ಟಿಗೆ ರಿಸೀವರುಗಳಾಗಿ ಪದಧಾರಿ ಅಧಿಕಾರಿಗಳನ್ನು ನೇಮಕ ಮಾಡಲು ತಹಸೀಲ್ದಾರರಿಗೆ ಯಾವ ಆಧಾರವೂ ಇರಲಿಲ್ಲ.

(vii) ಉಳಿದಂತೆಯೂ ಕೂಡ, ಈ ಹಿಂದಿನ ರಿಸೀವರನ ವಯೋನಿವೃತ್ತಿಯು ಹೊಸ ರಿಸೀವರನನ್ನು ನೇಮಕ ಮಾಡಿಕೊಳ್ಳಲು 2ನೇ ಸಂಖ್ಯೆಯ ಎದುರುದಾರನಿಗೆ ಆಧಾರವನ್ನು ಒದಗಿಸಿಲ್ಲ. 2ನೇ ಸಂಖ್ಯೆಯ ಎದುರುದಾರನು ಸಂಹಿತೆಯ 145 ಮತ್ತು 146ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸಿದ್ದಾನೆ. ಹೀಗಾಗಿ, ಪ್ರಶ್ನಿತ ಆದೇಶವು ತಳ್ಳಿಹಾಕಲು ತಕ್ಕುದಾಗಿದೆ ಮತ್ತು ಅವನು ಮಾಡಿದ ನೇಮಕಾತಿಯು ರದ್ದುಗೊಳಿಸಲು ತಕ್ಕುದಾಗಿರುತ್ತದೆಯೆಂದು ನಿವೇದಿಸಿದ್ದಾರೆ.

9. ತಮ್ಮ ವಾದದ ಸಮರ್ಥನೆಗಾಗಿ ಅರ್ಜಿದಾರನ ಪರವಾದ ವಕೀಲರು ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ:

*(i) 1991 ಸಿಆರ್ಐ ಎಲ್.ಜೆ. 1556=ಐಎಲ್ಆರ್ 1985 ಕೆಎಆರ್ 4038 ಬೊಮ್ಮ ಕೋಮ್ ನಾರಾಯಣ ನಾಯಕ್ –ವಿರುದ್ಧ– ವೊಮ್ಮ ಕೋಮ್ ನಾರಾಯಣ ನಾಯಕ್*

*(ii) 1989 (2) ಎಸ್‌ಸಿಸಿ 505*
*ಉತ್ತರ ಪ್ರದೇಶ ರಾಜ್ಯ –ವಿರುದ್ಧ– ಮಹಾರಾಜ ಧರ್ಮಂಧರ್ ಪ್ರಸಾದ್ ಸಿಂಗ್.*

*(iii) 1969(1) ಎಸ್‌ಸಿಸಿ 308*
*ಪುರ್ತಾಬ್‌ಪೋರ್ ಸಿ. ಲಿಮಿಟೆಡ್ –ವಿರುದ್ಧ– ಬಿಹಾರ್‌ನ ಕೇನ್ ಆಯುಕ್ತರು ಮತ್ತು ಇತರರು.*

*(iv)* *ಎಐಆರ್ 1952 ಎಸ್‌ಸಿ 16*
*ಪೊಲೀಸು ಆಯುಕ್ತರು, ಬಾಂಬೆ -ವಿರುದ್ಧ- ಗೋರ್ದಾಂದಾಸ್ ಭಂಜಿ.*

*(v)* *(1978) 1 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು, 210, ಚಂದೂ ನಾಯಕ್ ಮತ್ತು ಇತರರು -ವಿರುದ್ಧ- ಸೀತಾರಾಮ್ ಬಿ. ನಾಯಕ್ ಮತ್ತು ಮತ್ತೊಬ್ಬರು.*

*(vi)* *(1979) 4 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು, 665, ಮಥುರಾಲಾಲ್ -ವಿರುದ್ಧ- ಭಾನ್ವರ್‌ಲಾಲ್ ಮತ್ತು ಮತ್ತೊಬ್ಬರು.*

10. 6 ಮತ್ತು 7ನೇ ಸಂಖ್ಯೆಯ ಪ್ರತಿಸ್ಪರ್ಧಿ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮೇಲಿನ ವಾದಗಳನ್ನು ಖಂಡಿಸಿ ಪ್ರಶ್ನಿತ ಆದೇಶವು, 2ನೇ ಸಂಖ್ಯೆಯ ಎದುರುದಾರನು ಹೊರಡಿಸಿದ ಈ ಮೊದಲಿನ ಆದೇಶದ ಮುಂದುವರಿಕೆಯಷ್ಟೇ ಎಂದು, ಆ ಮೂಲಕ ವಿಶೇಷ ತಹಸೀಲ್ದಾರ್ ಕೆ. ಗೋಪಾಲಸ್ವಾಮಿಯವರನ್ನು ರಿಸೀವರಾಗಿ ನೇಮಕ ಮಾಡಲಾಗಿತ್ತೆಂದು ವಾದಿಸಿದ್ದಾರೆ. ಸದರಿ ಆದೇಶವನ್ನು ಅರ್ಜಿದಾರನಾಗಲಿ ಅಥವಾ ಇತರ ಯಾರೇ ಹಿತಾಸಕ್ತಿ ವ್ಯಕ್ತಿಗಳಾಗಲಿ ಪ್ರಶ್ನಿಸಿರುವುದಿಲ್ಲ. ಆದುದರಿಂದ, ಅರ್ಜಿದಾರನು 2ನೇ ಸಂಖ್ಯೆಯ ಎದುರುದಾರನು ಮಾಡಿದ ನೇಮಕಾತಿಯನ್ನು ಪ್ರಶ್ನಿಸುವುದನ್ನು ನಿಲ್ಲಿಸಿದ್ದಾನೆಂದು ನಿವೇದಿಸಿದ್ದಾರೆ.

11. ಎರಡನೆಯುದಾಗಿ, ಅವರು, ಅರ್ಜಿದಾರನು ಮಾಡಬೇಕೆಂದು ಕೋರಿರುವುದರಿಂದ ಪ್ರಶ್ನಿತ ಆದೇಶವು ಯಾವುದೇ ದೋಷ ಅಥವಾ ಅದೃಢತೆಯಿಂದ ಕೂಡಿಲ್ಲವೆಂದು ವಾದಿಸಿದ್ದಾರೆ. ಪ್ರಶ್ನಿತ ಆದೇಶವು, ವಿವೇಚನೆಯನ್ನು ಬಳಸುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 146(1)ನೇ ಪ್ರಕರಣದ

ಮೇರೆಗೆ ಅಧಿಕಾರದ ಆಹ್ವಾನಕ್ಕೆ ನೀಡಲು ಎತ್ತಿದ ಆಧಾರಗಳನ್ನು ಆದೇಶದಲ್ಲಿ ಹೇಳಲಾಗಿದೆ. ಆದೇಶವು, ಪಕ್ಷಕಾರರ ನಡುವಿನ ವ್ಯಾಜ್ಯದ ಸರಣಿಗಳು ಮತ್ತು ದಾವೆ ಹಾಗೂ ಅರ್ಜಿಯು ಇತ್ಯರ್ಥದಲ್ಲಿರುವುದು ಮತ್ತು ಶಾಂತಿಭಂಗವಾಗಿರುವ ಸಂಭವವಿರುವುದನ್ನು ತಿಳಿಸುತ್ತದೆ. "ಪದ್ಮಭೂಷಣ ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್" ಒಂದು ಸಾರ್ವಜನಿಕ ಟ್ರಸ್ಟ್ ಆಗಿದೆ. 2ನೇ ಸಂಖ್ಯೆಯ ಎದುರುದಾರರು ನೇಮಕ ಮಾಡಿದ ವ್ಯಕ್ತಿಗಳು ಕಂದಾಯ ಇಲಾಖೆಯ ಅಧಿಕಾರಿಗಳಾಗಿದ್ದು, ಅವರು ಟ್ರಸ್ಟ್‌ನ ಚಟುವಟಿಕೆಗಳಲ್ಲಿನ ಯಾವುದೇ ಖಾಸಗಿ ಹಿತಾಸಕ್ತಿಯನ್ನು ಹೊಂದಿರಲಿಲ್ಲ. ಎರಡನೇ ಸಂಖ್ಯೆಯ ಎದುರುದಾರನು ಪ್ರಾರಂಭಿಸಿದ ಕ್ರಮವು ಟ್ರಸ್ಟ್‌ನ ಹಿತಾಸಕ್ತಿ ಹೊಂದಿದ್ದುದರಿಂದ, ಅರ್ಜಿದಾರನು ವಾದಿಸಿದ ವಾದಗಳ ಅರ್ಥದಲ್ಲಿ ದೋಷವಿರಲು ಸಾಧ್ಯವಿಲ್ಲ.

12. ಪ್ರಸ್ತಾವಿತ ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, 6 ಮತ್ತು 7ನೇ ಸಂಖ್ಯೆಯ ಎದುರುದಾರರ ಪರವಾದ ಮಾನ್ಯ ವಕೀಲರ ಮಾರ್ಗದಲ್ಲೇ ವಾದಿಸಿದ್ದು, ಅವರು ದಂಡ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತತೆಗಾಗಿ 'ಸಂಹಿತೆ' ಯೆಂದು ಉಲ್ಲೇಖಿಸಲಾಗಿದೆ) 145 ಮತ್ತು 146ನೇ ಪ್ರಕರಣದ ಮೇರೆಗೆ 2ನೇ ಸಂಖ್ಯೆಯ ಎದುರುದಾರನು ಕಾನೂನುಸಮ್ಮತವಾಗಿ, ನಿಹಿತವಾದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದ್ದಾನೆ ಎಂದು ವಾದಿಸಿರುವ ಅವರು, ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿದ್ದು, ಪ್ರಶ್ನಿತ ಆದೇಶವು, ಅರ್ಜಿದಾರನು ಸಲ್ಲಿಸುವುದಕ್ಕೆ ಕೋರಲಾದಂಥ ಯಾವುದೇ ದೋಷ ಅಥವಾ ಕಾನೂನುಬಾಹಿರತೆಯಿಂದ ಕೂಡಿಲ್ಲವೆಂದು ವಾದಿಸಿದ್ದಾರೆ.

13. ನಾನು ಪಕ್ಷಕಾರರು ಸಲ್ಲಿಸಿದ ಪ್ರತಿವಾದಗಳಿಗೆ ನನ್ನ ಕಾಳಜಿಯ ಪರಿಗಣನೆಯನ್ನು ನೀಡಿದ್ದು, ಸಂಬಂಧಪಟ್ಟ ಪಕ್ಷಕಾರರು ಮಾಡಿದ ಸವಿಸ್ತಾರ ವಾದಗಳನ್ನು ಮತ್ತು ಹಾಜರುಪಡಿಸಲಾದ ದಸ್ತಾವೇಜುಗಳನ್ನು ಎಚ್ಚರಿಕೆಯಿಂದ ಅವಗಾಹಿಸಿದ್ದೇನೆ.

14. ಪಕ್ಷಕಾರರು ಮಂಡಿಸಿದ ವಾದಗಳ ಹಿನ್ನೆಲೆಯಲ್ಲಿ ಪರಿಗಣನೆಗಾಗಿ ಈ ಅಂಶವನ್ನು ಎತ್ತಲಾಗಿದೆ:

> *"ಟೆಕ್ನಿಕಲ್ ರಿಸೀವರ್ ಆಗಿ ಬೆಂಗಳೂರಿನ ಜಿಲ್ಲಾ ಆರೋಗ್ಯಾಧಿಕಾರಿಯನ್ನು ಹಾಗೂ ಪದ್ಮಭೂಷಣ ಡಾ॥ ಎಂ.ಸಿ.ಮೋದಿ ಪಬ್ಲಿಕ್ ಟ್ರಸ್ಟ್‌ನ ಆಡಳಿತಾತ್ಮಕ ರಿಸೀವರ್ ಆಗಿ ಬೆಂಗಳೂರು ಉತ್ತರ ತಾಲೂಕಿನ ವಿಶೇಷ ತಹಸೀಲ್ದಾರ್‌ರನ್ನು (ಪ್ರಭಾರ) ದಂಡ ಪ್ರಕ್ರಿಯಾ ಸಂಹಿತೆಯ 146ನೇ ಪ್ರಕರಣಕ್ಕೆ ಅನುಸಾರವಾಗಿ ನೇಮಕ ಮಾಡಲಾಗಿದೆಯೇ?*

15. ದಂಡ ಪ್ರಕ್ರಿಯಾ ಸಂಹಿತೆಯ 146ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

> *"146. **ವಿವಾದದ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಪ್ರಾಪಕನನ್ನು (ರಿಸೀವರ್) ನೇಮಿಸಲು ಶಕ್ತಿ:** (1) 145ನೇ ಪ್ರಕರಣದ (1)ನೇ ಒಳ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿದ ತರುವಾಯ ಯಾವುದೇ ಸಮಯದಲ್ಲಿ ಮೊಕದ್ದಮೆಯು ತುರ್ತಿನದೆಂದು ಮ್ಯಾಜಿಸ್ಟ್ರೇಟನು ಪರ್ಯಾಲೋಚಿಸಿದರೆ, ಅಥವಾ 145ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ಅಂಥ ಸ್ವಾಧೀನವನ್ನು ಯಾವ ಪಕ್ಷಕಾರನು ಆಗ ಹೊಂದಿಲ್ಲವೆಂದು ಅವನು ತೀರ್ಮಾನಿಸಿದರೆ ಅಥವಾ ಆಗ ಯಾವ ಪಕ್ಷಕಾರನು 145ನೇ ಪ್ರಕರಣದಲ್ಲಿ ಉಲ್ಲೇಖಿಸಲಾದಂತೆ ವಿವಾದದ ಸ್ವತ್ತಿನ ಸ್ವಾಧೀನವನ್ನು ಹೊಂದಿದ್ದನೆಂಬ ಬಗ್ಗೆ ಅವನು ಮನದಟ್ಟು ಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಆ ಪಕ್ಷಕಾರರಲ್ಲಿ ಯಾವ ವ್ಯಕ್ತಿಗೆ ಅದರ ಸ್ವಾಧೀನವನ್ನು ಹೊಂದುವ ಅಧಿಕಾರವಿದೆಯೆಂಬುದನ್ನು ಸಕ್ಷಮ ನ್ಯಾಯಾಲಯವು*

*ನಿರ್ಧರಿಸುವವರೆಗೆ ಅವನು ವಿವಾದಿತ ಸ್ವತ್ತನ್ನು ಜಫ್ತಿ ಮಾಡಬಹುದು.*

*ಪರಂತು, ವಿವಾದದ ಸ್ವತ್ತಿನ ಬಗ್ಗೆ ಇನ್ನು ಮೇಲೆ ಶಾಂತಿ ಭಂಗದ ಸಂಭವವಿಲ್ಲವೆಂದು ಅಂಥ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಯಾವುದೇ ಸಮಯದಲ್ಲಿ ಜಫ್ತಿಯನ್ನು ಹಿಂತೆಗೆದುಕೊಳ್ಳಬಹುದು.*

*(2) ಮ್ಯಾಜಿಸ್ಟ್ರೇಟನು ವಿವಾದದ ಸ್ವತ್ತನ್ನು ಜಫ್ತಿ ಮಾಡಿದಾಗ, ಯಾವುದೇ ಸಿವಿಲ್ ನ್ಯಾಯಾಲಯವು ಅಂಥ ವಿವಾದದ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ಪ್ರಾಪಕನನ್ನೂ (ರಿಸೀವರ್) ನೇಮಿಸದಿದ್ದರೆ, ಅವನು ಆ ಸ್ವತ್ತನ್ನು ನೋಡಿಕೊಳ್ಳುವುದಕ್ಕಾಗಿ ತನಗೆ ಯುಕ್ತವೆಂದು ತೋರುವಂತಹ ಏರ್ಪಾಟುಗಳನ್ನು ಮಾಡಬಹುದು; ಅಥವಾ ಅವನು ಸೂಕ್ತವೆಂದು ಆಲೋಚಿಸಿದರೆ ಅದಕ್ಕೆ ಒಬ್ಬ ಪ್ರಾಪಕನನ್ನು (ರಿಸೀವರ್) ನೇಮಿಸಬಹುದು; ಆ ಪ್ರಾಪಕನು (ರಿಸೀವರ್) ಮ್ಯಾಜಿಸ್ಟ್ರೇಟನ ನಿಯಂತ್ರಣಕ್ಕೊಳಪಟ್ಟು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ನೇಮಿತನಾದ ಪ್ರಾಪಕನ ಎಲ್ಲ ಶಕ್ತಿಗಳನ್ನು ಹೊಂದಿರತಕ್ಕದ್ದು:*

*ಪರಂತು, ತರುವಾಯ ಸಿವಿಲ್ ನ್ಯಾಯಾಲಯವು ವಿವಾದದ ಸ್ವತ್ತಿನ ಸಂಬಂಧದಲ್ಲಿ ಪ್ರಾಪಕನನ್ನು (ರಿಸೀವರ್) ನೇಮಿಸಿದಾಗ, ಮ್ಯಾಜಿಸ್ಟ್ರೇಟನು –*

*ಎ) ಸಿವಿಲ್ ನ್ಯಾಯಾಲಯದಿಂದ ನೇಮಿತನಾದ ಪ್ರಾಪಕನಿಗೆ (ರಿಸೀವರ್) ವಿವಾದಿತ ಸ್ವತ್ತಿನ ಸ್ವಾಧೀನವನ್ನು ಒಪ್ಪಿಸಿಕೊಡಬೇಕೆಂದು ತಾನು*

1. ಐಎಲ್ಆರ್ 1985, ಕಂಟ್ 4038

*ನೇಮಿಸಿದ ಪ್ರಾಪಕನಿಗೆ ಆದೇಶಿಸತಕ್ಕದ್ದು, ಮತ್ತು ತಾನು ನೇಮಿಸಿದ ಪ್ರಾಪಕನನ್ನು ಅನಂತರ ವಿಮುಕ್ತಿಗೊಳಿಸತಕ್ಕದ್ದು.*

ಬಿ) ನ್ಯಾಯೋಚಿತವಾಗಬಹುದಾದಂಥ ಇತರ ಪ್ರಾಸಂಗಿಕ ಅಥವಾ ಅನುಷಂಗಿಕ ಆದೇಶಗಳನ್ನು ಮಾಡಬಹುದು.

16. ದಂಡ ಪ್ರಕ್ರಿಯಾ ಸಂಹಿತೆಯ 145ನೇ ಪ್ರಕರಣದ ಹಿನ್ನೆಲೆಯಲ್ಲಿ ಸಂಹಿತೆಯ 146(1)ನೇ ಪ್ರಕರಣದ ವ್ಯಾಪ್ತಿ ಮತ್ತು ಭಾವಾರ್ಥವನ್ನು ವಿವರಿಸಿ, ಬೊಮ್ಮ ***ಕೋಮ್ ನಾರಾಯಣ್ ನಾಯಕ್ –ವಿರುದ್ಧ – ಬೊಮ್ಮ ಕೋಮ್ ನಾರಾಯಣ ನಾಯಕ್***[1] 12ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

"12. – – – – ಹೀಗೆ, 145ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳ ಹಿನ್ನೆಲೆಯಲ್ಲಿ 146ನೇ ಪ್ರಕರಣದ (1)ನೇ ಉಪ–ಪ್ರಕರಣದ ಹತ್ತಿರದ ವಿಶ್ಲೇಷಣೆಯು ದಂಡಾಧಿಕಾರಿಯವರು, 145ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಪ್ರಾರಂಭಿಕ ಆದೇಶದ ನಂತರ ಅವರ ಮುಂದಿದ್ದ ವಿಚಾರಣೆಯು ಇತ್ಯರ್ಥದಲ್ಲಿದ್ದ ಅವಧಿಯಲ್ಲಿ ತುರ್ತಿನ ಸಂದರ್ಭದಲ್ಲಿನ ವಿವಾದಕ್ಕೊಳಪಟ್ಟಿರುವುದಕ್ಕೆ ಸೇರಿಸಬಹುದಾಗಿದೆಯೆಂಬುದನ್ನು ತೋರಿಸುತ್ತಿದ್ದು, ವಿಚಾರಣೆಗೆ ಮೊದಲು ಪೂರ್ಣಗೊಳಿಸಲಾಗಿದ್ದು, ಇದರಿಂದ ಎರಡು ಮತ್ತು ಮೂರನೇ ಆಧಾರಗಳ ಅಡಿಯಲ್ಲಿ ಸ್ವತ್ತನ್ನು ಸೇರಿಸುವುದನ್ನು 145ನೇ ಪ್ರಕರಣದ ಮೇರೆಗಿನ ವಿಚಾರಣೆಯು ಅಂತ್ಯದಲ್ಲಿ ಮಾಡಬಹುದಾಗಿದೆಯೆಂಬುದನ್ನು ತೋರಿಸುತ್ತದೆ. ಆದಾಗ್ಯೂ, 146ನೇ ಪ್ರಕರಣದ ಮೇರೆಗಿನ ವಿವಾದದ ವಿಷಯುವನ್ನು ಸೇರಿಸುವ ದಂಡಾಧಿಕಾರಿಯವರ ಅಧಿಕಾರವು, (1)ನೇ ಉಪ–ಪ್ರಕರಣದಲ್ಲಿ ವಿಧಿಸಲಾದ ಆಧಾರಗಳಿರುವುದಕ್ಕೆ ಒಳಪಟ್ಟಿರುತ್ತದೆ. ಇರುವ ಅಂಥ

ಆಧಾರವು ವಿವಾದವನ್ನು ವಿಷಯಕ್ಕೆ ಸೇರಿಸುವ ಅಧಿಕಾರ ಹೊಂದಿರುವುದಿಲ್ಲ ಎಂಬ ಸಂಗತಿ ಇರುತ್ತದೆ. ಅಗತ್ಯವಾಗಿ, ದಂಡಾಧಿಕಾರಿಯವರು ತಮ್ಮ ಆದೇಶದಲ್ಲಿ ವಿವಾದದ ವಿಷಯವನ್ನು ಸೇರಿಸುವ ಆಧಾರವನ್ನು ತಿಳಿಸತಕ್ಕದ್ದೆಂಬುದನ್ನು ಇದು ಅನುಸರಿಸುತ್ತದೆ.

17. ಪ್ರಶ್ನಿತ ಆದೇಶವನ್ನು ಮೇಲಿನ ನಿರ್ಣಯದಲ್ಲಿ ನಿರೂಪಿಸಲಾದ ತತ್ವಗಳು ಹಾಗೂ ಸಂಹಿತೆಯ 145 ಹಾಗೂ 146ನೇ ಪ್ರಕರಣಗಳಲ್ಲಿ ಒಳಗೊಂಡಿರುವ ಉಪಬಂಧಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ 2ನೇ ಸಂಖ್ಯೆಯ ಎದುರುದಾರನು, ಸ್ವತ್ತನ್ನು ಸೇರಿಸಲು ಆದೇಶವನ್ನೂ ಮಾಡಿರುವುದಿಲ್ಲ ಅಥವಾ ಹಿಂದೆ ಹೇಳಲಾದ ಟ್ರಸ್ಟಿಗೆ ರಿಸೀವರ್‌ನನ್ನು ನೇಮಕ ಮಾಡುವ ಅಧಿಕಾರವನ್ನು ಚಲಾಯಿಸುವ ವಾರಂಟಿನ ಆಧಾರವಿರುವ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಸಣ್ಣ ಪ್ರಯತ್ನವನ್ನೂ ಸಹ ಅವನು ಮಾಡಿಲ್ಲವೆಂಬುದು ಗೋಚರವಾಗುತ್ತದೆ.

18. 2ನೇ ಎದುರುದಾರನು ಪ್ರಶ್ನಿತ ಆದೇಶಕ್ಕೆ ಕಾರಣವಾಗುವ ಸನ್ನಿವೇಶಗಳಿಗೆ ಸಂಬಂಧಪಟ್ಟಿರುವುದನ್ನು ಮಾಡಿದ್ದಾನೆ. ಆದರೆ, ಅದೇ ಪ್ರಕರಣದ ಅಗತ್ಯತೆಯನ್ನು ಮನಗಾಣಿಸುವುದಿಲ್ಲ ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ಸನ್ನಿವೇಶಗಳ ನಿರೂಪಣೆಯಷ್ಟೇ ವಿವೇಚನೆಯನ್ನು ಉಪಯೋಗಿಸಿರುವುದಿಲ್ಲ ಎಂಬುದನ್ನು, ವಿವಾದವನ್ನು ವಿಷಯಕ್ಕೆ ಸೇರಿಸಿರುವ ಅಥವಾ ಅದಕ್ಕೆ ರಿಸೀವರ್‌ನನ್ನು ನೇಮಕ ಮಾಡುವ ಸಲುವಾಗಿ ಆಧಾರಗಳಿರುವ ಬಗ್ಗೆ ಮನವರಿಕೆ ಮಾಡಿಕೊಡುತ್ತದೆಂಬುದನ್ನು ಊಹಿಸಲಾಗುವುದಿಲ್ಲ.

19. ಸಂಹಿತೆಯ 146ನೇ ಪ್ರಕರಣದ ಓದಿನಿಂದ, ಸದರಿ ಉಪಬಂಧದ ಅಡಿಯಲ್ಲಿ ದಂಡಾಧಿಕಾರಿಯವರು, ವಿವಾದದ ವಸ್ತುವಿಷಯವನ್ನು ಸೇರಿಸಿದ ನಂತರವಷ್ಟೇ ರಿಸೀವರನನ್ನು ನೇಮಕ ಮಾಡಿಕೊಳ್ಳಲು ಅಧಿಕಾರವುಳ್ಳವರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಸಂಹಿತೆಯ 146ನೇ ಪ್ರಕರಣದ ಪ್ರಸ್ತುತ ಶೀರ್ಷಿಕೆಯಲ್ಲಿ "ವಿವಾದದ ವಿಷಯವನ್ನು ಸೇರಿಸುವ ಹಾಗೂ ರಿಸೀವರನನ್ನು ನೇಮಕ ಮಾಡುವ ಅಧಿಕಾರ"

ಎಂದು ಓದಲಾಗಿದೆ. ಆಸ್ತಿಯನ್ನು ಒಮ್ಮೆ ಸೇರಿಸಿದರೆ, ಇದನ್ನು ಎಲ್ಲಾ ಸಂದರ್ಭಗಳಲ್ಲಿ ಸ್ವಯಂಚಾಲಿತವಾಗಿ ಅನುಸರಿಸಲಾಗುವುದಿಲ್ಲ. ರಿಸೀವರನನ್ನು ಸ್ವತ್ತನ್ನು ನೋಡಿಕೊಳ್ಳಲು ನೇಮಿಸಬೇಕು ಎಂಬುದು ಸತ್ಯವಾದುದಾಗಿದೆ. ಸಂಹಿತೆಯ 146(2)ನೇ ಪ್ರಕರಣದವನ್ನು ದೃಷ್ಟಿಯಲ್ಲಿಟ್ಟುಕೊಂಡು, ದಂಡಾಧಿಕಾರಿಯವರು ರಿಸೀವರನನ್ನು ನೇಮಕ ಮಾಡಿಕೊಳ್ಳುವ ಅಥವಾ ವಿವಾದದಲ್ಲಿರುವ ಆಸ್ತಿಯನ್ನು ಸಂರಕ್ಷಿಸುವ ಕೆಲವು ಇತರ ಏರ್ಪಾಟುಗಳನ್ನು ಮಾಡುವುದು ಅವರ ವಿವೇಚನಾಧಿಕಾರವಾಗಿರುತ್ತದೆ. ಆದರೆ, ಕೆಲವು ಸಂದರ್ಭದಲ್ಲಿ ದಂಡಾಧಿಕಾರಿಯವರು ವಿವಾದದ ವಿಷಯವನ್ನು ಮೊದಲು ಸೇರಿಸದೆ ರಿಸೀವರನನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಹೊಂದಿರುವುದಿಲ್ಲ. ಮೇಲಿನ ***ಬೊಮ್ಮ ಕೊಮ್ ನಾರಾಯಣ್ ನಾಯಕ್*** ಪ್ರಕರಣದಲ್ಲಿ ಈ ನ್ಯಾಯಾಲಯವು ಹೇಳಲಾದಂತೆ, ಸಂಹಿತೆಯ 146ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ವಿಧಿಸಲಾದಂಥ ವಿವಾದದ ವಿಷಯವನ್ನು ಸೇರಿಸುವುದು 2ನೇ ಉಪ–ಪ್ರಕರಣದ ಮೇರೆಗೆ ರಿಸೀವರನನ್ನು ನೇಮಕ ಮಾಡುವ ಪೂರ್ವನಿದರ್ಶನ ಸ್ಥಿತಿಯಲ್ಲಿದೆ.

20. ಸಂಹಿತೆಯ 145 ಮತ್ತು 146ನೇ ಪ್ರಕರಣದ ಹತ್ತಿರದ ಓದಿನಿಂದ ವಿವಾದದ ವಿಷಯವನ್ನು ಸೇರಿಸುವ ದಂಡಾಧಿಕಾರಿಯವರ ಅಧಿಕಾರ ವ್ಯಾಪ್ತಿಯು ಮೂರು ಸನ್ನಿವೇಶಗಳಲ್ಲಿ ಎಂದರೆ, ತುರ್ತು ಸಂದರ್ಭಗಳಲ್ಲಿ; (ii) ಪ್ರತಿಸ್ಪರ್ಧಿ ಪಕ್ಷಕಾರರು ಯಾರೂ ಕೂಡ ವಿವಾದದ ವಿಷಯವನ್ನು ಸ್ವಾಧೀನಪಡಿಸಿಕೊಳ್ಳುವುದು ಕಂಡುಬರದಿರುವಾಗ; (iii) ವಿವಾದಿತ ಸ್ವತ್ತಿನ ಸ್ವಾಧೀನತೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು ಸಾಧ್ಯವಾಗದಿದ್ದಾಗ ಈ ಸಂದರ್ಭಗಳಲ್ಲಿ ಉದ್ಭವಿಸುತ್ತದೆಯೆಂಬುದನ್ನು ಸ್ಪಷ್ಟಪಡಿಸುತ್ತದೆ. ಆದುದರಿಂದ ಈ ಆಧಾರಗಳ ಇರುವಿಕೆಯಲ್ಲದೆ, ದಂಡಾಧಿಕಾರಿಯವರು ವಿವಾದದ ವಿಷಯವನ್ನು ಸೇರಿಸುವ ಅಥವಾ ಸಂಹಿತೆಯ 146ನೇ ಪ್ರಕರಣದ ಮೇರೆಗೆ ರಿಸೀವರನನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರಲು ಸಾಧ್ಯವಿರುವುದಿಲ್ಲ.

21. ವಿಚಾರಣೆಯ ವ್ಯಾಪ್ತಿ ಹಾಗೂ ಮೇಲಿನ ಉಪಬಂಧಗಳ ಮೇರೆಗಿನ ದಂಡಾಧಿಕಾರಿಯವರ ಅಧಿಕಾರ ವ್ಯಾಪ್ತಿಯ ವಿಸ್ತೀರ್ಣವನ್ನು ಸರಿಯಾಗಿ ತಿಳಿದುಕೊಳ್ಳುವ ಸಲುವಾಗಿ, ***ಮಥುರಾಲಾಲ್ –ವಿರುದ್ಧ– ಭಾನ್ವರ್‌ಲಾಲ್ ಹಾಗೂ ಮತ್ತೊಬ್ಬರು***[2] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕಾನೂನಿನ ವಿಷದೀಕರಣವನ್ನು ಉಲ್ಲೇಖಿಸುವುದು ಉಪಯುಕ್ತವಾದುದಾಗಿದೆ. ಸದರಿ ತೀರ್ಪಿನ 4ನೇ ಕಂಡಿಕೆಯಲ್ಲಿ ಈ ಮುಂದಿನಂತೆ ಓದಲಾಗಿದೆ:

> *"4. ಅಷ್ಟೇ ಸ್ಪಷ್ಟವಾಗಿ, ದಂಡ ಪ್ರಕ್ರಿಯಾ ಸಂಹಿತೆಯ 145 ಮತ್ತು 146ನೇ ಪ್ರಕರಣಗಳೆರಡೂ, ಯಾವುದೇ ಭೂಮಿ ಅಥವಾ ಜಲ ಅಥವಾ ಅದರ ಎಲ್ಲೆಗಳಿಗೆ ಸಂಬಂಧಪಡುವ ವಿವಾದದ ಕಾರಣದಿಂದ ಶಾಂತಿ ಭಂಗವಾಗುವ ಸಂಭವವಿದ್ದಲ್ಲಿ ಸನ್ನಿವೇಶ ನಿರ್ಣಯಕ್ಕೆ ಯೋಜನೆಯನ್ನು ಒಟ್ಟಿಗೇ ರೂಪಿಸುತ್ತವೆ. 146ನೇ ಪ್ರಕರಣವು, ತನ್ನ ಸಂದರ್ಭವನ್ನು ಶೋಧಿಸಿ, ಸ್ವತಂತ್ರವಾಗಿ 145ನೇ ಪ್ರಕರಣವನ್ನು ಓದಿದರೆ, ಇದರಲ್ಲಿ ಸೂಚಿಸಲಾದ ಯಾವುದೇ ಈ ಮೂರು ಸನ್ನಿವೇಶಗಳಲ್ಲಿ ಒಮ್ಮೆ ಜೋಡಿಸುವುದು ಪರಿಣಾಮಕಾರಿಯಾಗಿದೆಯೆಂಬ ಅರ್ಥ ಕೊಡುವುದನ್ನು ಸಮರ್ಥಿಸುವುದು ವಿವಾದವನ್ನು ಸಕ್ಷಮ ನ್ಯಾಯಾಲಯವು ಮಾತ್ರ ನಿರ್ಣಯಿಸಬಹುದು, ಸೇರಿಸುವುದನ್ನು ಪರಿಣಾಮಕಾರಿಯಾಗಿರುವವರು ದಂಡಾಧಿಕಾರಿಯವರಲ್ಲ. ಆದರೆ 146ನೇ ಪ್ರಕರಣವನ್ನು 145ನೇ ಪ್ರಕರಣದಿಂದ ಪ್ರತ್ಯೇಕಗೊಳಿಸಲು ಸಾಧ್ಯವಿಲ್ಲ. ಇದನ್ನು 145ನೇ ಪ್ರಕರಣದ ಸಂದರ್ಭದಲ್ಲಿ ಮಾತ್ರ ಓದಿಕೊಳ್ಳಬಹುದು. ಸಾಂದರ್ಭಿಕವಾಗಿ, ನಿರ್ಮಿತಿಯು, ಪ್ರತ್ಯೇಕವಾಗಿರುವ ನಿರ್ಮಿತಿಯನ್ನು ಖಂಡಿತವಾಗಿ ಚಾಲ್ತಿಗೆ ತರಬೇಕು. ಇಲ್ಲದಿದ್ದರೆ, ಇದು ತಪ್ಪುದಾರಿಗೆಳೆಯಬಹುದು. ಅದು ನಿರ್ಮಾಣದ ಮೊದಲ ತತ್ವಗಳಲ್ಲೊಂದಾಗಿದೆ. ಆದುದರಿಂದ, 145ನೇ ಪ್ರಕರಣವನ್ನು ನೋಡಿ*

2. (1979) 4 ಎಸ್‌ಸಿಸಿ, 665

*146ನೇ ಪ್ರಕರಣವನ್ನು ಅದರ ಸಂದರ್ಭದಲ್ಲಿ ಪರಿಗಣಿಸೋಣ. 145ನೇ ಪ್ರಕರಣವು, ಮೊದಲಿಗೆ ಯಾವುದೇ ಭೂಮಿ ಅಥವಾ ಜಲ ಅಥವ ಅದರ ಎಲ್ಲೆಗಳಿಗೆ ಸಂಬಂಧಪಡುವ ಶಾಂತಿಗೆ ಭಂಗತರಲು ಕಾರಣವಾಗುವ ಸಂಭವವಿರುವ ವಿವಾದವೆಂದು ದಂಡಾಧಿಕಾರಿಯವರಿಗೆ ಮನವರಿಕೆ ಮಾಡಿಕೊಡುವುದನ್ನು ಹಾಗೂ ತದನಂತರ ಆದೇಶವನ್ನು ಹೊರಡಿಸಲಾಗಿದೆಯೆಂದು ಅವರಿಗೆ ಮನವರಿಕೆಯಾಗಿರುವ ಆಧಾರಗಳನ್ನು ತಿಳಿಸಿ ಪೂರ್ವಭಾವಿ ಆದೇಶವಾಗಿ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ವೃತ್ತಿಪರ ವಕೀಲರಿಗೆ ತಿಳಿಸುವುದು ಮತ್ತು ಸಂಬಂಧಪಟ್ಟ ಪಕ್ಷಕಾರರು ಅವರ ನ್ಯಾಯಾಲಯಕ್ಕೆ ಹಾಜರಾಗುವುದನ್ನು ಅಗತ್ಯಪಡಿಸಿ ವಿವಾದದ ವಿಷಯದ ವಾಸ್ತವಿಕ ಸ್ವಾಧೀನದ ಸಂಗತಿಗೆ ಸಂಬಂಧಪಟ್ಟ ಅವರ ಸಂಬಂಧಿತ ಕ್ಲೇಮುಗಳ ವಿವರಣೆಗಳನ್ನು ಲಿಖಿತದಲ್ಲಿಡುವುದು ಎಂಬುದನ್ನು ಉದ್ದೇಶಿಸುತ್ತದೆ. ಪೂರ್ವಭಾವಿ ಆದೇಶವನ್ನು ರೂಪಿಸುವುದರಲ್ಲಿ ಆದ ವಿಫಲತೆಯನ್ನು ತರುವಾಯದ ಎಲ್ಲಾ ವ್ಯವಹರಣೆಗಳನ್ನು ದೂಷಿಸಲು ಕೆಲವು ಉಚ್ಚ ನ್ಯಾಯಾಲಯಗಳು ತೀರ್ಮಾನಿಸಿರುವ 145ನೇ ಪ್ರಕರಣದ ಮೇರೆಗಿನ ವ್ಯವಹರಣೆ ಮೂಲವನ್ನು ಪ್ರಾರಂಭಿಕ ಆದೇಶ ಹಾಗೆ ಪರಿಗಣಿಸಿದೆ. ದಂಡಾಧಿಕಾರಿಯವರು ಪ್ರಾರಂಭಿಕ ಆದೇಶವನ್ನು ಮಾಡುವ ಮೂಲಕ 145 ಹಾಗೂ 146ನೇ ಪ್ರಕರಣಗಳ ಮೇರೆಗೆ ಮುಂದುವರಿಯುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಾರೆ. . . . ."*

22. 145 ಮತ್ತು 146ನೇ ಪ್ರಕರಣದ ಮೇರೆಗೆ ವ್ಯವಹರಣೆಗಳನ್ನು ವಿಲೇ ಮಾಡುವುದಕ್ಕೆ ಮುಂದುವರಿಯಲು ಯಾವ ರೀತಿಯಲ್ಲಿ ದಂಡಾಧಿಕಾರವನ್ನು ಅಗತ್ಯಪಡಿಸಲಾಗಿತ್ತೋ ಆ ರೀತಿಯನ್ನು, ***ಚಂದು ನಾಯಕ್ ಮತ್ತು ಇತರರು – ವಿರುದ್ಧ– ಸೀತಾರಾಮ್ ಬಿ. ನಾಯಕ್ ಮತ್ತು ಮತ್ತೊಬ್ಬರು***[3] ಪ್ರಕರಣದಲ್ಲಿ ಸರ್ವೋಚ್ಚ

3. (1978) 1 ಎಸ್‌ಸಿಸಿ 210.

ನ್ಯಾಯಾಲಯವು ಸಂಕ್ಷಿಪ್ತವಾಗಿ ವಿಷದೀಕರಿಸಿದೆ. ಅದರ 7ನೇ ಕಂಡಿಕೆಯಲ್ಲಿ ಹೀಗೆ ಅಭಿಪ್ರಾಯಪಡಲಾಗಿದೆ:

> "7. ಮೊದಲನೆಯದಾಗಿ, ದಂಡಾಧಿಕಾರಿಯವರು ಸಂಹಿತೆಯ 145ನೇ ಪ್ರಕರಣದ ವಿವಿಧ ಉಪಬಂಧಗಳಿಗನುಸಾರವಾಗಿ ವ್ಯವಹರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸಬೇಕು. ಅವರು ತಮ್ಮ ಮುಂದೆ ಇಡಲಾದ ಸಾಕ್ಷ್ಯ ಅಥವಾ ಮುಂದಿಡಬೇಕಾದ ಸಾಕ್ಷ್ಯದ ಪರಿಗಣನೆಯ ನಂತರ ಯಾವುದೇ ಪಕ್ಷಕಾರನಿಗೆ ಸ್ವಾಧೀನತೆಯನ್ನು ಘೋಷಿಸಲು ಸಮರ್ಥರಾಗಿರುವರು. ಅವರು ಹಾಗೆ ಮಾಡುವರು. ಆ ಸಂದರ್ಭದಲ್ಲಿ ಇತರ ಪಕ್ಷಕಾರನು ಸ್ವಾಧೀನತೆ ಘೋಷಿಸಿದ ಪಕ್ಷಕಾರನ ಸ್ವಾಧೀನದ ಯಾವುದೇ ತೊಂದರೆಯನ್ನು ((4)ನೇ ಉಪ–ಪ್ರಕರಣದ ಪರಂತುಕವನ್ನು ಅನ್ವಯಿಸುವುದು ಅಗತ್ಯವೆಂದು ಕಂಡುಬಂದ ಸಂದರ್ಭದಲ್ಲಿ ಭಾವಿತ ಸ್ವಾಧೀನವನ್ನು ಒಳಗೊಂಡಂತೆ) ನೀಡುವುದನ್ನು ನಿಷೇಧಿಸಲಾಗುವುದು. ಆಗ ದಂಡಾಧಿಕಾರಿಯವರು 146ನೇ ಪ್ರಕರಣದ (1)ನೇ ಉಪ–ಪ್ರಕರಣದ ಪರಂತುಕಕ್ಕೆ ಅನುಸಾರವಾಗಿ ಸೇರಿಸುವುದನ್ನು ಹಿಂಪಡೆಯಬೇಕು, ಏಕೆಂದರೆ, ಸ್ವಾಧೀನದ ಪಕ್ಷಕಾರನನ್ನು ಘೋಷಿಸಿದ ಅವರ ಆದೇಶದ ಪ್ರಕಾರ ವಿವಾದದ ವಿಷಯಕ್ಕೆ ಸಂಬಂಧಿಸಿದಂತೆ ಶಾಂತಿ ಭಂಗವಾಗುವ ಯಾವುದೇ ಸಾಧ್ಯತೆ ಇರುವುದಿಲ್ಲ. ದಂಡಾಧಿಕಾರಿಯವರ ಸ್ವಾಧೀನತೆಯ ಪ್ರಕ್ರಿಯೆಯಲ್ಲಿ ಕಂಡುಬರದ ಪಕ್ಷಕಾರನು, ಅವನ ಕುಂದುಕೊರತೆಗಳು ಏನಾದರೂ ಇದ್ದರೆ ಅದರ ನಿವಾರಣೆಗೆ ಕೋರಬೇಕು. ಆದಾಗ್ಯೂ, ದಂಡಾಧಿಕಾರಿಯವರು, 143ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಮಾಡಲಾದ ಆದೇಶದ ದಿನಾಂಕದಂದು ವಿವಾದಿತ ಆಸ್ತಿಯ ಸ್ವಾಧೀನತೆಯು ಯಾವ ಪಕ್ಷಕಾರರಿಗೂ ಸೇರುವುದಿಲ್ಲವೆಂದು ನಿರ್ಧರಿಸಿದರೆ, ಅಥವಾ ವಿವಾದದ ವಿಷಯವನ್ನು ಯಾರಿಗೆ ವಹಿಸಬೇಕು ಎಂಬ ಬಗ್ಗೆ ತಾನು ಮನವರಿಕೆ ಮಾಡಿಕೊಳ್ಳಲು ಅಸಮರ್ಥನಾದರೆ, 146(1)ನೇ ಪ್ರಕರಣದಲ್ಲಿ ಉಪಬಂಧಿಸಲಾದಂಥ ಪಕ್ಷಕಾರರ ಹಕ್ಕುಗಳನ್ನು

ಸಕ್ಷಮ ನ್ಯಾಯಾಲಯ ನಿರ್ಧರಿಸುವವರೆಗೆ ಸಾಧನವನ್ನು ತೆಗೆಯುವ ಅಗತ್ಯವಿರುವುದಿಲ್ಲ. ಸನ್ನಿವೇಶವನ್ನು ಅವಲಂಬಿಸುವಂಥ ಸನ್ನಿವೇಶದಲ್ಲಿ ಅಗತ್ಯವಿದ್ದರೆ, ದಂಡಾಧಿಕಾರಿಯುವರು ಸಂದರ್ಭಾನುಸಾರ ಸಿವಿಲ್ ನ್ಯಾಯಾಲಯದ ಮೂಲಕ ಸಂಹಿತೆಯ 146ನೇ ಪ್ರಕರಣದ (2)ನೇ ಉಪ–ಪ್ರಕರಣವನ್ನು ತೆಗೆದುಕೊಳ್ಳಬಹುದು''.

23. ಮೇಲಿನ ವಿವರಣೆಯು, ಸಂಹಿತೆಯ 145 ಮತ್ತು 146ನೇ ಪ್ರಕರಣದ ಉಪಬಂಧಗಳು ಅವುಗಳೇ ಒಂದು ವ್ಯವಸ್ಥೆಯನ್ನು ರೂಪಿಸುತ್ತವೆ. ಈ ಎರಡೂ ಉಪಬಂಧಗಳನ್ನು, ಯಾವುದೇ ಭೂಮಿ, ಜಲ ಅಥವಾ ಅದರ ಎಲ್ಲೆಗಳಿಗೆ ಸಂಬಂಧಪಡುವ ವಿವಾದದ ಕಾರಣದಿಂದ ಶಾಂತಿಭಂಗವಾಗುವ ಸಾಧ್ಯತೆಯಿರುವ ಸನ್ನಿವೇಶದ ನಿರ್ಣಯಕ್ಕೆ ಪ್ರಾಧಿಕಾರಗಳ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸುವಾಗ ಒಟ್ಟಿಗೆ ಓದಿಕೊಳ್ಳಲು ಅಗತ್ಯಪಡಿಸಲಾಗಿದೆಯೆಂಬುದನ್ನು ಅಪಾರವಾಗಿ ಸ್ಪಷ್ಟಪಡಿಸುತ್ತದೆ.

24. ಮೇಲಿನ ಉಪಬಂಧಗಳ ಪ್ರಕಾರ, ದಂಡಾಧಿಕಾರಿಯವರ ಮೊದಲ ಅಗತ್ಯತೆಯೇನೆಂದರೆ ಸಂಬಂಧಪಡುವ ಯಾವುದೇ ಭೂಮಿ ಅಥವಾ ಜಲ ಅಥವಾ ಅದರ ವಿವಾದವು ಶಾಂತಿಭಂಗವನ್ನುಂಟು ಮಾಡುವ ವಿವಾದವಾಗಿದೆಯೆಂಬುದನ್ನು ಮನವರಿಕೆ ಮಾಡಿಕೊಳ್ಳುವುದು, ನಂತರ, ಅವನಿಗೆ ಮನವರಿಕೆಯಾದ ಆಧಾರಗಳನ್ನು ತೋರಿಸುವ ಪ್ರಾರಂಭಿಕ ಆದೇಶವನ್ನು ಹೊರಡಿಸುವುದು, ಅವರ ನ್ಯಾಯಾಲಯಕ್ಕೆ ಹಾಜರಾಗಲು ಪಕ್ಷಕಾರರನ್ನು ಕರೆದು, ಸಂಬಂಧಪಟ್ಟ ಕ್ಲೇಮುಗಳ ವಿವರಣೆಗಳನ್ನು ಲಿಖಿತದಲ್ಲಿ ಇಡುವುದಾಗಿದೆ. ಪ್ರಾರಂಭಿಕ ಆದೇಶವು, ಸಂಹಿತೆಯ 145ನೇ ಪ್ರಕರಣದ ಮೂಲಕದ ವ್ಯವಹರಣೆಗೆ ಆಧಾರವಾಗುತ್ತದೆ. ಸಂಹಿತೆಯ 145ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಆದೇಶವನ್ನು ಮಾಡಿದ ನಂತರವಷ್ಟೇ, ದಂಡಾಧಿಕಾರಿಯವರು ತುರ್ತು ಎಂದು ಪರಿಗಣಿಸಿದರೆ, ಪ್ರತಿಸ್ಪರ್ಧಿ ಕ್ಲೇಮುದಾರರಿಗೆ ವಿವಾದದ ವಿಷಯವನ್ನು ವಹಿಸಬೇಕು ಎಂಬುದನ್ನು ಮನವರಿಕೆ ಮಾಡಿಕೊಳ್ಳಲು ಅಸಮರ್ಥವಾದರೆ, ಅವರು ವಿವಾದದ ವಿಷಯವನ್ನು ಸೇರಿಸಬಹುದು.

25. ಮೇಲಿನ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಹಿತೆಯ 146ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ಜಪ್ತಿ ಆದೇಶವನ್ನು, ಸಂಬಂಧಪಟ್ಟ ಆಸ್ತಿಗೆ ಪಕ್ಷಕಾರರ ಹಕ್ಕುಗಳನ್ನು ಸಕ್ಷಮ ನ್ಯಾಯಾಲಯ ತೀರ್ಮಾನಿಸುವವರೆಗೆ ಮುಂದುವರಿಸಲಾಗುತ್ತದೆ. ಸಂಹಿತೆಯ 26ನೇ ಸಂಖ್ಯೆಯ ನಮೂನೆಯು, ಭೂಸ್ವಾಧೀನತೆ ಮುಂತಾದವುಗಳಿಗೆ ಸಂಬಂಧಿಸಿದ ವಿವಾದದ ಸಂದರ್ಭದಲ್ಲಿ ಜಪ್ತಿಯ ವಾರಂಟಿನ ನಮೂನೆಯನ್ನು ಒದಗಿಸುತ್ತದೆ. ಆದರೆ ಮೇಲಿನ ಉಪಬಂಧ ಮತ್ತು ಮೇಲಿನ ನಿರ್ಣಯದಲ್ಲಿ ಮಾಡಲಾದ ಕಾನೂನಿನ ವಿವರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಂಹಿತೆಯ 146ನೇ ಪ್ರಕರಣದ ಮೇರೆಗಿನ ಜಪ್ತಿಯ ಆದೇಶವಿಲ್ಲದೆ, ತಹಸೀಲ್ದಾರನು ವಿವಾದದ ವಿಷಯವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಸಂಬಂಧಿತ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳದ ವಿವಾದದ ವಿಷಯದ ಸ್ವಾಧೀನದಲ್ಲಿರುವ ರಿಸೀವರನನ್ನು ಅವನು ಜಾಗಕ್ಕೆ ಕೂರಿಸಲು ಸಾಧ್ಯವಿಲ್ಲ. ಜಪ್ತಿಯ ಆದೇಶದ ಜಾರಿಯು, ಅಭಿರಕ್ಷಣೆಯಲ್ಲಿರುವ ಸ್ವತ್ತನ್ನು ಇಡುವುದಾಗಿದೆ. ಜಪ್ತಿಯ ಕಾರಣದಿಂದ, ಕಾನೂನಿನ ಸ್ವಾಧೀನತೆಯು ಕಾನೂನುಸಮ್ಮತ ಮಾಲೀಕನಲ್ಲಿ ಮುಂದುವರಿದರೂ ಕೂಡ ದಂಡಾಧಿಕಾರಿಯು, ಆಸ್ತಿಯನ್ನು ಹೊಂದಿದ್ದು, ಅಂತಿಮವಾಗಿ ಉತ್ತರವರ್ತಿಯಾಗಿರುವ ಪಕ್ಷಕಾರನ ಹೆಸರಿನಲ್ಲಿರುತ್ತದೆ. ಆದುದರಿಂದ, ಜಾರಿಯಲ್ಲಿರುವ ಜಪ್ತಿಯಿಲ್ಲದೆ, ರಿಸೀವರನು, ಆಸ್ತಿಯಲ್ಲಿ ಬರುವಂತಿಲ್ಲ ಮತ್ತು ಅದರ ಆಡಳಿತವನ್ನು ತೆಗೆದುಕೊಳ್ಳಲಾಗುವುದಿಲ್ಲ. ಕಾನೂನಿನ ಸ್ಥಾನಮಾನ ಹೀಗಿದ್ದು, ಸ್ವತ್ತುಗಳ ಜಪ್ತಿಯನ್ನು ಮೊದಲು ಪರಿಣಾಮಕಾರಿಗೊಳಿಸದ ರಿಸೀವರನ ನೇಮಕಾತಿಯ ಆದೇಶವು, ಸಂಹಿತೆಯ 145 ಮತ್ತು 146ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದ ವ್ಯವಸ್ಥೆಗೆ ವಿರುದ್ಧವಾಗಿದ್ದು, ಆ ಮೂಲಕ ಚಲಾಯಿಸಲಾದ ಇಡೀ ಚಲಾವಣೆಯು ಅಸಿಂಧುವಾಗಿರುತ್ತದೆ ಮತ್ತು ಕಾನೂನುಬಾಹಿರವಾಗಿರುತ್ತದೆ.

26. ಪ್ರಶ್ನಿತ ಆದೇಶವನ್ನು ಮೇಲಿನ ತತ್ವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ, ರೂಪಿಸಬಹುದಾದ ಒಂದೇ ಒಂದು ನಿರ್ಣಯ ಯಾವುದೆಂದರೆ, ಇದು ಸಂಹಿತೆಯ 145 ಮತ್ತು 146ನೇ ಪ್ರಕರಣದಲ್ಲಿ ನಿಯಮಿಸಲಾದ ಯಾವುದೇ ಪ್ರಕ್ರಿಯಾತ್ಮಕ ಮತ್ತು ಕಾನೂನಾತ್ಮಕ ಅಗತ್ಯತೆಗಳನ್ನು ಪೂರೈಸಿರುವುದಿಲ್ಲ ಎಂಬುದಾಗಿದೆ. ಪ್ರಶ್ನಿತ ಆದೇಶದ ಪ್ರವರ್ತಕ ಭಾಗವನ್ನು ಈ ಮುಂದಿನಂತೆ ಓದಲಾಗಿದೆ:

**ಆದೇಶ**

"ಈ ಮೇಲ್ಕಂಡ ಉಲ್ಲೇಖಗಳನ್ವಯ ಪರಿಶೀಲಿಸಿ, ಪದ್ಮಭೂಷಣ ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್‌ಗೆ ದಾವಣಗೆರೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ, ಇವರು ಶ್ರೀ ಸುಭಾಷ್‌ಚಂದ್ರ ಮೋದಿಯವರನ್ನು, ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್‌ಗೆ ಟ್ರಸ್ಟಿಯಾಗಿ ನೇಮಕ ಮಾಡಿ ಆದೇಶಿಸಿರುವಂತೆ ಈ ಟ್ರಸ್ಟ್ ಬಗ್ಗೆ ಸಿವಿಲ್ ನ್ಯಾಯಾಲಯಗಳಲ್ಲಿ, ಇತರ ಅರ್ಜಿ ಸಂಖ್ಯೆ: 196/2014, ಮೂಲ ದಾವೆ 837/2014ರಂತೆ ಪ್ರಕರಣಗಳು ದಾಖಲಾಗಿದ್ದು ವಿಚಾರಣಾ ಹಂತದಲ್ಲಿರುವಂತೆ ನ್ಯಾಯಾಲಯದ ಮುಂದಿನ ಆದೇಶಗಳಿಗೊಳಪಡಿಸಿ, ದಿನಾಂಕ: 31.05.2014ರಂದು ವಿಶೇಷ ತಹಸೀಲ್ದಾರ್‌ರವರನ್ನು ರಿಸೀವರ್ (ಪ್ರಾಪಕರು) ಆಗಿ ನೇಮಕ ಮಾಡಿ ಆದೇಶಿಸಿದಂತೆ ನೇಮಕಾತಿ ಆದೇಶವನ್ನು ಈ ದಿನದಿಂದಲೇ ಹಿಂಪಡೆಯಲಾಗಿದೆ ಎಂದು ದಿನಾಂಕ: 18.07.2016ರಂದು ಆದೇಶಿಸಿದೆ.

ಸಹಿ/–
ದಿನಾಂಕ: 18.07.16.
ಕಾರ್ಯನಿರ್ವಾಹಕ ದಂಡಾಧಿಕಾರಿಗಳು
ಹಾಗೂ ತಹಸೀಲ್ದಾರ್,
ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು"

27. ಪ್ರಶ್ನಿತ ಆದೇಶದ ಕೇವಲ ಅವಗಾಹನೆಯು, ಮಾನ್ಯ ದಂಡಾಧಿಕಾರಿಯವರು ತಾಂತ್ರಿಕ ರಿಸೀವರನಾಗಿ ಜಿಲ್ಲಾ ಆರೋಗ್ಯ ಅಧಿಕಾರಿಯನ್ನು ಮತ್ತು ಆಡಳಿತಾತ್ಮಕ ರಿಸೀವರನಾಗಿ ವಿಶೇಷ ತಹಸೀಲ್ದಾರನನ್ನು (ಪ್ರಭಾರ) ದಾವಣಗೆರೆಯ ಜಿಲ್ಲಾಧಿಕಾರಿಯು ಹೊರಡಿಸಿದ ನಿರ್ದೇಶನದ ಏಕಮಾತ್ರ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು

ಮುಂದುವರಿದಿದ್ದರು ಎಂಬುದು ಬಹಿರಂಗವಾಗುತ್ತದೆ. ಪೋಲೀಸು ಅಧಿಕಾರಿಯು, ಸಂಬಂಧಪಟ್ಟ ವಿವಾದವನ್ನು ಸೇರಿಸಲು ಅಥವಾ ಅದಕ್ಕೆ ರಿಸೀವರನನ್ನು ನೇಮಕ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ 145 ಮತ್ತು 146ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದ ಆಧಾರಗಳು ಇವೆಯೆಂಬುದನ್ನು ಮೊದಲ ನೋಟಕ್ಕೆ ಮನಗಾಣಿಸುವ ಸಲುವಾಗಿ 2ನೇ ಸಂಖ್ಯೆಯ ಎದುರುದಾರನ ಮುಂದೆ ಯಾವುದೇ ಸಾಕ್ಷ್ಯಾಧಾರವನ್ನು ಇಡಲಾಗಿತ್ತು ಎಂಬುದನ್ನು ಸೂಚಿಸಲು ಪ್ರಶ್ನಿತ ಆದೇಶದಲ್ಲಿ ಏನೂ ಇರುವುದಿಲ್ಲ. 2ನೇ ಸಂಖ್ಯೆಯ ಎದುರುದಾರನು ಯಾವುದೇ ವಿಚಾರಣೆಯನ್ನು ನಡೆಸಲು ವಿಫಲನಾಗಿದ್ದು, ಸಂಹಿತೆಯ 146(2)ನೇ ಪ್ರಕರಣದ ಮೇರೆಗೆ ರಿಸೀವರನನ್ನು ನೇಮಕ ಮಾಡಿಕೊಂಡು ಮುಂದುವರಿಯುವ ಸಲುವಾಗಿ ಸಂಹಿತೆಯ 145(1)ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂಥ ಪ್ರಾರಂಭಿಕ ಆದೇಶವನ್ನು ಹೊರಡಿಸಲು ವಿಫಲನಾಗಿರುತ್ತಾನೆ. ಮತ್ತೊಂದು ಕಡೆ 2ನೇ ಸಂಖ್ಯೆಯ ಎದುರುದಾರನು, ದಾವಣಗೆರೆಯ ಜಿಲ್ಲಾಧಿಕಾರಿಯ ಕಟ್ಟಪ್ಪಣೆಗೆ ತನ್ನ ವಿವೇಚನೆಯನ್ನು ಒಡ್ಡಿಕೊಂಡಿರಬಹುದೆಂಬುದು ಕಂಡುಬರುತ್ತದೆ ಮತ್ತು ಅವನು ಸಂಹಿತೆಯ 145 ಮತ್ತು 146ನೇ ಪ್ರಕರಣಗಳಲ್ಲಿ ವಿಧಿಸಲಾದ ಯಾವುದೇ ಪ್ರಕ್ರಿಯಾತ್ಮಕ ಅಗತ್ಯತೆಗಳನ್ನು ಅನುಸರಿಸದೆ ಅವನ ಮೂಲಕ ಹೊರಡಿಸಿದ ನಿರ್ದೇಶನಗಳನ್ನು ಮಾತ್ರ ಜಾರಿಗೆ ತರಲಾಗಿದೆ.

28. ತಹಸೀಲ್ದಾರರು ಹಾಗೂ ದಾವಣಗೆರೆಯ ಜಿಲ್ಲಾಧಿಕಾರಿಯವರು, ಶ್ರೀ ಕೆ. ಗೋಪಾಲಸ್ವಾಮಿ, ರಿಸೀವರ್, ಇವರನ್ನು ಅವನ ವಯೋನಿವೃತ್ತಿಯ ದಿನಾಂಕದವರೆಗೆ ರಿಸೀವರನಾಗಿ ಕಾರ್ಯ ನಿರ್ವಹಿಸಲು ಮುಂದುವರೆಸಿ, ಆದೇಶ ಸಂಖ್ಯೆ ಎಂಎಜಿ/107 ಸಿಆರ್:392/13–14 ದಿನಾಂಕ: 16.12.2016ರ ಪ್ರಕಾರ ನೇಮಕ ಮಾಡಲಾಗಿದೆಯೆನ್ನುವ ದೋಷಯುಕ್ತ ಊಹೆಯ ಆಧಾರದಲ್ಲಿ ಮುಂದುವರಿದಿರುವರು. ಈ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಾಖಲೆಗಳು, ದಿನಾಂಕ: 18.7.2016ರಂದು ತಹಸೀಲ್ದಾರನು ಹೊರಡಿಸಿದ ತರುವಾಯದ ಆದೇಶದ ಮೂಲಕ ಶ್ರೀ ಕೆ. ಗೋಪಾಲಸ್ವಾಮಿಯವರನ್ನು ರಿಸೀವರನಾಗಿ ಮಾಡಿಕೊಂಡ

ನೇಮಕಾತಿಯನ್ನು ರದ್ದುಮಾಡಲಾಗಿತ್ತು ಮತ್ತು ತಟಸ್ಥಗೊಳಿಸಲಾಗಿತ್ತು ಎಂಬುದನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತವೆ. ಇದರ ಪರಿಣಾಮವಾಗಿ, ಹಿಂದಿನ ರಿಸೀವರನನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡಿಕೊಳ್ಳಲು ತಹಸೀಲ್ದಾರರಿಗೆ ನಿರ್ದೇಶಿಸಲು ಜಿಲ್ಲಾಧಿಕಾರಿಗೆ ಯಾವುದೇ ಆಧಾರವಿಲ್ಲ ಅಥವಾ ಹಿಂದೆ ಹೇಳಲಾದ ಶ್ರೀ ಕೆ. ಗೋಪಾಲಸ್ವಾಮಿಯವರ ಸ್ಥಳದಲ್ಲಿ ಟ್ರಸ್ಟಿನ ರಿಸೀವರನಾಗಿ ಜಿಲ್ಲಾ ಆರೋಗ್ಯ ಅಧಿಕಾರಿಯನ್ನು ಹಾಗೂ ಪ್ರಭಾರಿ ತಹಸೀಲ್ದಾರರನ್ನು ನೇಮಕ ಮಾಡಿ ಮುಂದುವರಿಸಲು 2ನೇ ಸಂಖ್ಯೆಯ ಎದುರುದಾರನಿಗೆ ಯಾವುದೇ ಆಧಾರ ಇರುವುದಿಲ್ಲ. ಅಷ್ಟೇ ಅಲ್ಲದೆ, ರಿಸೀವರನ ವಯೋನಿವೃತ್ತಿಯು, ವಿವಾದದ ವಿಷಯಕ್ಕೆ ರಿಸೀವರನನ್ನು ನೇಮಕ ಮಾಡುವುದಕ್ಕೆ ಒಂದು ಆಧಾರವಾಗಿರುವುದಿಲ್ಲ.

29. ಹೀಗಾಗಿ, ಮೇಲಿನ ಎಲ್ಲಾ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಮೇಲೆ ಉಲ್ಲೇಖಿಸಲಾದ ಪ್ರಾಧಿಕಾರಗಳಲ್ಲಿ ನಮೂದಿಸಲಾದ ಕಾನೂನಿನ ಸ್ಥಾನವನ್ನು ಒಟ್ಟಾರೆಯಾಗಿ ಪರಿಗಣಿಸಿದ ಮೇಲೆ ನಾನು, ಎರಡನೇ ಸಂಖ್ಯೆಯ ಎದುರುದಾರನು, ದಂಡ ಪ್ರಕ್ರಿಯಾ ಸಂಹಿತೆಯ 145 ಹಾಗೂ 146ನೇ ಪ್ರಕರಣಗಳ ಅಗತ್ಯತೆಗಳನ್ನು ಪೂರೈಸಲು ವಿಫಲನಾಗಿರುವನೆಂದು ತೀರ್ಮಾನಿಸುತ್ತೇನೆ. ಪ್ರಶ್ನಿತ ಆದೇಶವು, ವಿವಾದದ ವಿಷಯವನ್ನು ಸೇರಿಸುವ ಆಧಾರಗಳನ್ನು ಬಹಿರಂಗಪಡಿಸುತ್ತಿಲ್ಲ. 2ನೇ ಸಂಖ್ಯೆಯ ಎದುರುದಾರನು, ವಿಷಯದ ಅಧಿಕಾರವ್ಯಾಪ್ತಿಯನ್ನು ಹೊಂದುವ ಯಾವುದೇ ತುರ್ತು ಅಥವಾ ಅಂಥ ಇತರ ಆಧಾರಗಳು ಇರುವಿಕೆಯ ಬಗ್ಗೆ ಯಾವುದೇ ಮನವರಿಕೆ ಮಾಡಿಕೊಂಡಿರುವುದಿಲ್ಲ. 2ನೇ ಸಂಖ್ಯೆಯ ಎದುರುದಾರನು ವಿವಾದದ ವಿಷಯದ ಮೊದಲ ಪರಿಣಾಮಕಾರಿ ಜೋಡಣೆಯಿಲ್ಲದೆ ರಿಸೀವರನನ್ನು ನೇಮಕಮಾಡಿಕೊಳ್ಳುವಲ್ಲಿ ಗಂಭೀರ ಲೋಪವೆಸಗಿದ್ದಾರೆ.

ಇದರ ಪರಿಣಾಮವಾಗಿ, ಸಂಹಿತೆಯ 145 ಮತ್ತು 146ನೇ ಪ್ರಕರಣಗಳ ಉಪಬಂಧಗಳಿಗೆ ವಿರುದ್ಧವಾಗಿರುವ 2ನೇ ಸಂಖ್ಯೆಯ ಎದುರುದಾರನು ತೆಗೆದುಕೊಂಡ ಕ್ರಮವನ್ನು ಸಮರ್ಥಿಸಲಾಗುವುದಿಲ್ಲ. ಪ್ರಶ್ನಿತ ಆದೇಶವು ತಳ್ಳಿಹಾಕಲು ತಕ್ಕುದಾಗಿರುತ್ತದೆ.

ತದನುಸಾರವಾಗಿ ಅರ್ಜಿಯನ್ನು ಪುರಸ್ಕರಿಸಲಾಗಿದೆ. ಅನುಬಂಧ–ಎಂ ನ ಪ್ರಕಾರ 2ನೇ ಸಂಖ್ಯೆಯ ಎದುರುದಾರನು ಹೊರಡಿಸಿದ ದಿನಾಂಕ: 16.12.2016ರ ಸಂಖ್ಯೆ: ಎಂಎಜಿ (107) ಸಿಆರ್.392/2013–14ನ್ನು ಹೊಂದಿರುವ ಪ್ರಶ್ನಿತ ಆದೇಶವನ್ನು ತಳ್ಳಿಹಾಕಲಾಗಿದ್ದು, ಈ ಆದೇಶದಲ್ಲಿ ಮಾಡಲಾದ ಅಭಿಪ್ರಾಯೋಕ್ತಿಗಳ ಹಿನ್ನೆಲೆಯಲ್ಲಿ ಸಂಹಿತೆಯ 145 ಹಾಗೂ 146ನೇ ಪ್ರಕರಣಗಳಿಗೆ ಅನುಸಾರವಾಗಿ ಕಟ್ಟುನಿಟ್ಟಾಗಿ ವಿಷಯವನ್ನು ವ್ಯವಹರಿಸಲು 2ನೇ ಸಂಖ್ಯೆಯ ಎದುರುದಾರನಿಗೆ ವಿಷಯವನ್ನು ಕಳುಹಿಸಲಾಗಿದೆ.

2ನೇ ಸಂಖ್ಯೆಯ ಎದುರುದಾರನಿಗೆ, ಜಫ್ತಿಯ ಮೂಲಕವಾಗಲಿ ಅಥವಾ ರಿಸೀವರನನ್ನು ನೇಮಕ ಮಾಡಿಕೊಳ್ಳುವ ಮೂಲಕವಾಗಲಿ ಯಾವುದೇ ಏರ್ಪಾಟನ್ನು ಮಾಡುವುದು ಅಗತ್ಯವೆಂದು ಕಂಡು ಬಂದ ಸಂದರ್ಭದಲ್ಲಿ, ಅವನು ಈ ಆದೇಶ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗೆ ದಂಡ ಪ್ರಕ್ರಿಯಾ ಸಂಹಿತೆಯ 145 ಹಾಗೂ 146ನೇ ಪ್ರಕರಣಗಳ ಉಪಬಂಧಗಳಿಗನುಸಾರವಾಗಿ ಹಾಗೆ ಮಾಡತಕ್ಕದ್ದು. ಇವೊತ್ತಿನಿಂದ 30 ದಿನಗಳ ಅವಧಿಯವರೆಗೆ, ಮಧ್ಯಂತರ ಏರ್ಪಾಟಿನ ಮೂಲಕ ಬೆಂಗಳೂರು ಉತ್ತರ ತಾಲೂಕಿನ ತಹಸೀಲ್ದಾರನು, 'ಪದ್ಮಭೂಷಣ ಡಾ॥ ಎಂ.ಸಿ. ಮೋದಿ ಪಬ್ಲಿಕ್ ಟ್ರಸ್ಟ್'ನ ರಿಸೀವರಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಅರ್ಜಿಯ ವಿಲೇವಾರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ವಾದಕಾಲೀನ ಅರ್ಜಿ ಸಂಖ್ಯೆ:1/17 ಮತ್ತು 3/17 ಹಾಗೂ ವಾದಕಾಲೀನ ಅರ್ಜಿ ಸಂಖ್ಯೆಗಳು: 5/17, 7/17 ಹಾಗೂ ವಾದಕಾಲೀನ ಅರ್ಜಿ 10/7ನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಇದನ್ನು ವಜಾಗೊಳಿಸಲಾಗಿದೆ.

ಪ್ರಸ್ತಾವಿತ ಎದುರುದಾರರು ಸಲ್ಲಿಸಿದ ವಾದಕಾಲೀನ ಅರ್ಜಿ ಸಂಖ್ಯೆಗಳು: 6/17, 8/17, 9/17 ಹಾಗೂ ವಾದಕಾಲೀನ ಅರ್ಜಿ 1/18ನ್ನು ಮೇಲಿನ ಆದೇಶದನುಸಾರ ವಿಲೇವಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.